ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 25 ಜೂನ್ 22, 1986 ಬೆಲೆ 50 ಪೈಸೆ

ವಿಶೇಷ ಪುರವಣಿ

ಅಖಿಲ ಭಾರತ ಕಿಸಾನ ಸಭೆಯ ಸ್ವರ್ಣ ಮಹೋತ್ಸವ ಸಮ್ಮೇಳನ ಹೋದ ತಿಂಗಳು ಪಾಟ್ನಾದಲ್ಲಿ ನೆರವೇರಿತ್ತು. ಆ ಸಮ್ಮೇಳನ ದಲ್ಲಿ ಕಿಸಾನ ಸಭೆಯ ಧೋರಣೆ, ರೈತರ ಮುಖ್ಯ ಬೇಡಿಕೆಗಳು, ಸಮ್ಮೇಳನದ ನಿರ್ಣಯಗಳು, ಬೇರೆ ಸಂಘ-ಸಂಸ್ಥೆಗಳಿಂದ ಬಂದ ಸಂದೇಶಗಳು ಹಾಗೆಯೇ ಪಾಲಿಟ್‌ಬ್ಯೂರೋ ಸದಸ್ಯರಾದ ಬಿ.ಟಿ. ರಣದಿವೆ, ಅ. ಭಾ. ಕಿ. ಸಭೆಯ ಉಪಾಧ್ಯಕ್ಷರಾದ ಹರಕಿಶನ್‌ಸಿಂಗ್ ಸುರ್ಜಿತ್ ಅವರ ಭಾಷಣಗಳನ್ನೊಳಗೊಂಡ ನಾಲ್ಕು ಪುಟಗಳ ವಿಶೇಷ ಪುರವಣಿಯನ್ನು 6-7-86ರ ಐಕ್ಯರಂಗದ ಜೊತೆಯಲ್ಲಿ ಪ್ರಕಟಿಸ ಲಾಗುವುದು. ಮುಖ್ಯವಾಗಿ ರೈತ ಸಂಘದ ಕಾರ್ಯಕರ್ತರು ಹೆಚ್ಚು ಪ್ರತಿಗಳನ್ನು ತರಿಸಿ ತಮ್ಮ ಪ್ರಚಾರಕ್ಕೆ ಉಪಯೋಗಿಸಬೇಕು.

ಹೆಚ್ಚಿನ ಪ್ರತಿಗಾಗಿ ಕೂಡಲೇ ಬರೆಯಿರಿ.

ಆ ಸಂಚಿಕೆ ಬೆಲೆ ಒಂದು ರೂ. ಇರುತ್ತದೆ.

ಪಶ್ಚಿಮ ಬಂಗಾಲ ನಗರ ಸಭೆ ಚುನಾವಣೆ

ಎಡರಂಗ ಪಕ್ಷಗಳ ಜಯಭೇರಿ

ಪಶ್ಚಿಮ ಬಂಗಾಲದಲ್ಲಿ ನಡೆದ ಪುರಸಭಾ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದ ಎಡರಂಗ ಭಾರಿ ವಿಜಯಗಳಿಸಿದೆ. 75 ಪುರಸಭೆಗಳಿಗೆ ನಡೆದ ಚುನಾವಣೆಯಲ್ಲಿ ವಾಮರಂಗ 56 ರಲ್ಲಿ ಗೆದ್ದುಕೊಂಡಿದೆ. 11 ರಲ್ಲಿಕಾಂಗ್ರೆ ಗೆದ್ದಿದೆ7. ನಗರ ಸಭೆಗಳಲ್ಲಿ ಯಾವ ಪಕ್ಷಕ್ಕೂ ಬಹುಮತ ಲಭಿಸಿಲ್ಲ. 2 ಸ್ವತಂತ್ರ ಸದಸ್ಯರ ವಶ. ಈ ಚುನಾವಣೆಯಲ್ಲಿ ಸಿ. ಪಿ. ಐ. (ಎಂ) 811, ಸಿ. ಪಿ. ಐ. 126, ಫುರೋಗಾಮಿ ಪಕ್ಷ 107, ಆರ್. ಎಸ್. ಪಿ. 67, ಆರ್.ಸಿ.ಪಿ.ಐ. 8 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಕಾಂಗ್ರೆ 1195, ಬಿಜೆಪಿ.147, ಜನತಾ 38, ಕಾಂಗ್ರೆಸ್ (ಎಸ್) 2, ಲೋಕದಳ 3, ಸಿ.ಪಿ.ಐ. (ಎಂ. ಎಲ್) 2, ಇದಲ್ಲದೆ ಎಡರಂಗ ಸರಕಾರ ಬೆಂಬಲಿತ ಉಮೇದವಾರರು ಹಾಗೆಯೇ ಇತರ ಸ್ವತಂತ್ರರು, ಸಣ್ಣ ಪಕ್ಷಗಳು ಸ್ಪರ್ಧಿಸಿದ್ದವು.

ಚುನಾವಣಾ ವೈಖರಿ

ಬಿಜೆಪಿ, ಜನತಾ, ಲೋಕದಳವೊದಲಾದ ಪಕ್ಷಗಳಿಗೆ ಹಾಗೆಯೇ ಎಸ್. ಯು. ಸಿ. ಐ. ಗೆ ಈ ಚುನಾವಣೆಯಲ್ಲಿ ಒಂದು ಸ್ಥಾನವೂ ಲಭ್ಯವಾಗಲಿಲ್ಲ.

ಮುರ್ಶಿನಾಬಾದ್ ಬಿಟ್ಟು ಇತರ ಎಲ್ಲ ಜಿಲ್ಲೆಗಳಲ್ಲಿಯೂ ಎಡರಂಗಗೆದ್ದಿದೆ. ಮುರ್ಶಿನಾಬಾದಿನಲ್ಲಿ ಕಾಂಗ್ರೆ 6 ರಲ್ಲಿ 3 ನಗರಸಭೆಗಳಲ್ಲಿ ಬಹುಮತ ಪಡೆದಿದೆ. ಡಾರ್ಜಿಲಿಂಗಿನ ಕಾಲಿಂಪಾಂಗ್ ಮತ್ತು 24 ಪರಗಣದ ಡುಂಡುಂನಲ್ಲಿ ಸ್ವತಂತ್ರ ಅಭ್ಯರ್ಥಿಗಳು ಬಹುಮತ ದಲ್ಲಿದ್ದಾರೆ. 1984ರ ಲೋಕಸಭೆ ಚುನಾವಣೆಯಲ್ಲಿ ಎಲ್ಲಾ 6 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆ ಗಂಗಾನದಿಯ ಎರಡೂದಡಗಳ ಜಿಲ್ಲೆಗಳಲ್ಲಿ ಸಂಪೂರ್ಣ ಸೋತಿದೆ. ಅಲ್ಲಿ ಎಡರಂಗ ಎಲ್ಲಾ ನಗರ ಸಭೆಗಳಲ್ಲಿ ಗೆದ್ದಿದೆ.

ಪ. ಬಂಗಾಲ ಎಡರಂಗ ಸರಕಾರದ ಸ್ಥಳೀಯ ಸಂಸ್ಥೆಗಳ ಮಂತ್ರಿಯಾದ ಪ್ರಶಾಂತ ಸೂರ ಅವರು ಚುನಾವಣಾ ಫಲಿತಾಂಶದ ಕುರಿತು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ, ಮುಂದಿನ ವಿಧಾನ ಸಭಾ ಚುನಾವಣಾ ದೃಷ್ಟಿಯಿಂದನಗರ ಸಭೆಗಳಲ್ಲಿ ಎಡರಂಗದ ಗೆಲುವು ರಾಜಕೀಯ ದೃಷ್ಟಿಯಿಂದ ಅತಿ ಮಹತ್ವದ್ದಾಗಿದೆಂದೂ 1984ರ ಚುನಾವಣೆಯಲ್ಲಿ ತಮ್ಮಿಂದ ದೂರ ಸರಿದ ಮಧ್ಯಮ ಮತ್ತು ಮೇಲ್ವರ್ಗದ ಜನರ ಮತಗಳನ್ನು ಪುನಃಪಡೆಯಲು ಸಾಧ್ಯವಾಗಿದೆ ಎಂದೂ ಹೇಳಿದ್ದಾರೆ.

ಎಡರಂಗದ ಛೇರ್‌ಮನ್ ಮತ್ತು ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಸರೋಜ ಮುಖರ್ಜಿಯವರು ಎಡರಂಗದ ಧೋರಣೆ ಮತ್ತು ಚಟುವಟಿಕೆಗಳನ್ನು ಜನರು ಒಪ್ಪಿದ್ದಾರೆಂಬುದನ್ನು ಈ ಪರಿಣಾಮ "ನಿಸ್ಸಂಶಯವಾಗಿ ತೋರಿಸಿಕೊಟ್ಟಿದೆ" ಎಂದು ಸಾರಿದ್ದಾರೆ. ಕಾಂಗ್ರೆ ಮತ್ತು ದೊಡ್ಡ ಪತ್ರಿಕೆಗಳನ್ನೊಳಗೊಂಡು ಕೆಲವು ಪಕ್ಷಗಳು "ನಿರಂತರ ಅಪಪ್ರಚಾರ" ಮಾಡಿದರೂ ಕೂಡ ಜನತೆ ಎಡರಂಗವನ್ನು ಬಲವಾಗಿ ಬೆಂಬಲಿಸಿದೆಂಬುದನ್ನು ಇದು ಪ್ರದರ್ಶಿಸುತ್ತದೆಂದೂ ಹೇಳಿದ್ದಾರೆ.

ಚುನಾವಣೆಯ ಹಿನ್ನೆಲೆ

ಎಡರಂಗದ ಆಡಳಿತೆಯಲ್ಲಿ ಎರಡನೇ ಸಲ ಈ ಚುನಾವಣೆ ನಡೆದಿದೆ. ಹಿಂದೆ ಆಳುತ್ತಿದ್ದ ಕಾಂಗ್ರೆಸ್ಸಿನವರು 15-20 ವರ್ಷ ಚುನಾವಣೆ ನಡೆಸಲು ನಿರಾಕರಿಸಿದ್ದರು. ಚುನಾಯಿತ ಪ್ರತಿನಿಧಿಗಳ ಬದಲಾಗಿ ಅಧಿಕಾರಿಗಳೇ ಆಡಳಿತ ನಡೆಸುವುದಕ್ಕೆ ಕಾಂಗ್ರೆಸ್ ಒಲವು ತೋರಿಸಿತ್ತು. ಎಡರಂಗ ಸರಕಾರ ಎರಡನೇ ಸಲ ಚುನಾವಣೆ ನಡೆಸಿ, ಪ್ರಜಾಪ್ರಭುತ್ವ ಪದ್ಧತಿಯಲ್ಲಿ ತನ್ನ ವಿಶ್ವಾಸವನ್ನು ಪ್ರದರ್ಶಿಸಿದೆ. 1978 ರಲ್ಲಿ ಎಡರಂಗ ಅಧಿಕಾರಕ್ಕೆ ಬಂದ ನಂತರ 1986 ರ ವರೆಗೆ ಎಡರಂಗ ಸರಕಾರ ಅತ್ಯಂತ ಶಾಂತರೀತಿಯಿಂದ, ಯಾವದೇ ರೀತಿಯ ಚುನಾವಣಾ ಅವ್ಯವಹಾರವಿಲ್ಲದೇ ವಿಧಾನಸಭೆ, ಲೋಕಸಭೆ, ಪಂಚಾಯತ್, ಮತ್ತು ನಗರಸಭೆ ಚುನಾವಣೆಗಳನ್ನು ನಡೆಸಿದೆ. ಮತಗಟ್ಟೆಗಳನ್ನು ವಶಪಡಿಸಿಕೊಳ್ಳುವ ಬಂದೂಕು ತೋರಿಸಿ ನಿಜವಾದ ಮತದಾರರನ್ನು ಓಡಿಸಿ ಖೊಟಾ ಮತನೀಡುವಂಥ ನೆರೆಯ ಬಿಹಾರ ರಾಜ್ಯಕ್ಕೆ ಇದು ಎದ್ದು ಕಾಣುವ ವ್ಯತ್ಯಯವಾಗಿದೆ.

ಅಧಿಕಾರ ವಿಕೇಂದ್ರೀಕರಣ

ಎಡರಂಗ ಸರಕಾರ ಹೇಳಿದಂತೆ ಮಾಡಿತೋರಿಸುತ್ತದೆಂಬುದನ್ನು ಈ ಚುನಾವಣೆ ತೋರಿಸಿ ಕೊಡುತ್ತದೆ. ನಿರ್ಣಯ ಮಾಡುವುದೆಲ್ಲ ಜನರ ಹತ್ತಿರದಲ್ಲೇ ಆಗಲಿ, ಆ ಕಾರಣದಿಂದಲೇ ಆಡಳಿತಾತ್ಮಕ ಮತ್ತು ಖರ್ಚಿನ ಅಧಿಕಾರ ರಾಜ್ಯ-ಕೇಂದ್ರಗಳೊಳಗೆ ವಿತರಣೆಯಾಗಿ, ಕೆಳಮಟ್ಟದಲ್ಲಿ ಪ್ರಾತಿನಿಧಿಕ ನಿರ್ಣಯ ತೆಗೆದುಕೊಳ್ಳುವ ಪಂಚಾಯತಿ, ನಗರಸಭೆಗಳಿಗೂ ಆ ಅಧಿಕಾರ ಲಭ್ಯವಾಗಲೆಂದು ಎಡರಂಗ ಅಪೇಕ್ಷಿಸುತ್ತದೆ.

(ಕೊನೆಯ ಪುಟಕ್ಕೆ)

ಬಿ. ಎಚ್. ಇ. ಎಲ್. ಚುನಾವಣೆಯಲ್ಲಿ

ಸೂರಿಯವರಿಗೆ ಜಯ

ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲೊಂದಾದ ಭಾರತ ಹೆವಿ ಇಲೆಕ್ಟ್ರಿಕಲ್ಸ್ ಎಂಪ್ಲಾಯೀಸ್ ಯೂನಿಯನಿನ ಸದಸ್ಯರು 13-6-86 ರಂದು ನಡೆದ ಚುನಾವಣೆಯಲ್ಲಿ ರಾಜ್ಯ ಸಿ. ಐ. ಟಿ. ಯು ಅಧ್ಯಕ್ಷರಾದ ಎಸ್ ಸೂರ್ಯನಾರಾಯಣರಾವ್ ಅವರನ್ನು ಗೌರವ ಸದಸ್ಯರನ್ನಾಗಿ ಆರಿಸಿದ್ದಾರೆ. ಎ. ಐ. ಟಿ. ಯು. ಸಿ. ಮುಖಂಡ ಎಂ. ಎಸ್. ಕೃಷ್ಣನ್ ಅವರನ್ನು 164 ಮತಗಳಿಂದ ಸೋಲಿಸಿದ್ದಾರೆ. ಕೃಷ್ಣನ್ ಅವರ ಪರವಾಗಿ ಸಾವಿರಾರು ರೂಪಾಯಿ ಖರ್ಚು ಮಾಡಲಾಗಿದೆ. ಹಾಗೆಯೇ ಸಿ.ಐ.ಟಿ.ಯು ವಿರುದ್ಧ ಕೀಳ್ಮಟ್ಟದ ಅಪಪ್ರಚಾರ ಮಾಡಲಾಗಿದೆ. ರಾಜೀವ ಗಾಂಧಿಯವರ ಆರ್ಥಿಕ ನೀತಿಯಿಂದಾಗಿ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಿಗೆ ದೊಡ್ಡ ಪೆಟ್ಟು ಬೀಳುತ್ತಿರುವಾಗ ಸಿ.ಐ.ಟಿ.ಯು ಮಾತ್ರ ಆ ಧೋರಣೆಯ ವಿರುದ್ಧ ಹೋರಾಡುತ್ತಿದೆ. ಇಂಥ ಸಂದರ್ಭದಲ್ಲಿ ಸಿ.ಐ.ಟಿ.ಯು ಮುಖಂಡರನ್ನು ಬಿಹೆಚ್‌ಇಎಲ್ ಕಾರ್ಮಿಕರು ಆರಿಸಿರುವುದಕ್ಕೆ ಮಹತ್ವವಿದೆ. ಬಿಹೆಚ್‌ಇಎಲ್ ಕಾರ್ಮಿಕರನ್ನು ಸಿ. ಐ. ಟಿ. ಯು ಅಭಿನಂದಿಸುತ್ತದೆ.

ಕಾವೇರಿ ನದಿ ನೀರಿನ ಹಂಚಿಕೆ

ಕರ್ನಾಟಕ, ತಮಿಳು ನಾಡುಗಳಲ್ಲಿ ಹರಿಯುತ್ತಿರುವ ಕಾವೇರಿ ನದಿ ನೀರಿನ ಹಂಚಿಕೆ ಕುರಿತು, ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಪುದುಚೇರಿಗಳ ಮುಖ್ಯಮಂತ್ರಿಗಳ ಸಭೆ ಬೆಂಗಳೂರಿನಲ್ಲಿ ನಡೆಯಿತು. ಸುದೀರ್ಘ ಚರ್ಚೆಯಾಯಿತು. ಯಾವ ಒಪ್ಪಂದಕ್ಕೆ ಬರಲೂ ಸಾಧ್ಯವಾಗಲಿಲ್ಲ. ಸಭೆಯ ಕೊನೆಯಲ್ಲಿ ಕೇಂದ್ರ ಜಲ ಸಂಪನ್ಮೂಲ ಸಚಿವ ಶಂಕರಾನಂದ ಅವರು "ಈಗ ಕೇಂದ್ರ ಸರಕಾರ ನಿರ್ಧಾರ ಕೈಗೊಳ್ಳಬೇಕಾಗಿದೆ. ಸದ್ಯಕ್ಕೆ ಕಾಯಿದೆಯಂತೆ ಕ್ರಮ ಕೈಗೊಳ್ಳಬೇಕಾಗಿದೆ" ಎಂದು ಹೇಳಿ ಸಭೆ ಮುಕ್ತಾಯಗೊಳಿಸಿದರು.

ಬ್ರಿಟಿಷರ ಕಾಲದಲ್ಲಿ 1924 ರಲ್ಲಿ ಅಂದಿನ ಅವಿಭಕ್ತ ಮದ್ರಾಸ್ ಅಧಿಪತ್ಯ, ಮೈಸೂರು ಸಂಸ್ಥಾನ, ಚೀಫ್ ಕಮಿಶನರ ಪ್ರಾಂತವಾಗಿದ್ದ ಕೊಡಗು ಅವರೊಳಗೆ ಚರ್ಚೆಯಾಗಿ 50 ವರ್ಷದ ಒಪ್ಪಂದವಾಗಿತ್ತು. ಆ ಒಪ್ಪಂದ 1974 ರಲ್ಲಿ ಮುಗಿದಿದೆ. 1970 ರಿಂದಲೂ ಕಾವೇರಿ ನೀರಿನ ಪುನರ್ ಹಂಚಿಕೆ ಆಗಬೇಕೆಂದೂ, ಈಗ ಪರಿಸ್ಥಿತಿ ಬದಲಾವಣೆಯಾಗಿದೆಂದೂ, ರಾಜ್ಯಗಳ ಅಭಿವೃದ್ಧಿ ಯೋಜನೆಗಳನ್ನು ಗಮನಕ್ಕೆತೆಗೆದುಕೊಂಡುಹೊಸಹಂಚಿಕೆ ಆಗಬೇಂದೂ ಕರ್ನಾಟಕಪದೇ ಪದೇ ಕೇಳುತ್ತ ಬಂದಿತ್ತು. ಆದರೆ ಸಮಸ್ಯೆಗೆ ಪರಿಹಾರ ಸಿಗಲಿಲ್ಲ.

50 ವರ್ಷಗಳ ಹಿಂದೆ ಕೃಷ್ಣರಾಜ ಸಾಗರ ನಿರ್ಮಾಣವಾಗಿತ್ತು. ಅನಂತರ ಕಪಿಲಾ, ಹೇಮಾವತಿ, ಹಾರಂಗಿ ಯೋಜನೆಗಳನ್ನು ಪ್ರಾರಂಭಿಸಿದ್ದರೂ,

(ಕೊನೆಯ ಪುಟಕ್ಕೆ)

ಎಂ. ಎಸ್. ಉಗ್ರಪ್ಪನವರ ಮಾಸ್ಕೊ ಸಂದರ್ಶನ

ಸೋವಿಯತ್ ದೇಶ ತಲುಪಿದೆ

ತನಗೆ ದೆಹಲಿಯಲ್ಲಿ ಕೇಂದ್ರದ ಸಿ. ಐ. ಟಿ. ಯು ಮುಖಂಡರು 20-5-86 ರಂದು ಮಾಸ್ಕೊಗೆ ಪ್ರಯಾಣ ಮಾಡಲು ಪಾಸ್‌ಪೋರ್ಟ್ ನನ್ನ ಫೂರುಫೋಟೋಸಮೇತ 27-5-86 ರಾತ್ರಿಗೆ ದೆಹಲಿ ಮುಟ್ಟಿರಬೇಕೆಂದು ತಿಳಿಸಿದ್ದರು. ಆದರಂತೆ ಪ್ರಾಯಾಸದಿಂದಲೂ ಮಾಸ್ಕೊ ಪ್ರಯಾಣಕ್ಕೆ ಅವರು ಹೇಳಿದ ಸಮಯಕ್ಕೆ ದೆಹಲಿ ಮುಟ್ಟಿದೆನು. 20-5-86 ಕ್ಕೆ ಬೆಂಗಳೂರಲ್ಲಿ ಪಾಸ್‌ಪೋರ್ಟ್ ಸಿಗುವ ಖಾತರಿ ಇಟ್ಟುಕೊಂಡಿದ್ದೆನಾದರೂ ಅದು 27-5-86 ಕ್ಕೆ ಸಿಕ್ಕಿತು. ಅಂದು ಸಂಜೆ 5-30 ಕ್ಕೆ ವಿಮಾನದಲ್ಲಿ ಪ್ರಯಾಣ ಮಾಡಬೇಕಾಯಿತು. ನಾನು ಈ ವಿಮಾನ ಪ್ರಯಾಣವನ್ನು ತಪ್ಪಿಸಿ ರೈಲು ಪ್ರಯಾಣದಲ್ಲೇ ದೆಹಲಿಯನ್ನು ಮುಟ್ಟಬೇಕೆಂಬ ಸಂಕಲ್ಪ ಇತ್ತು. ಆದರೆ ವೇಳೆಗೆ ಸರಿಯಾಗಿ ಕೆಲಸಗಳು ಆಗದಿದ್ದರಿಂದ ಅನಿವಾರ್ಯವಾಯಿತು. ಮೊದಲನೆಯ ವಿಮಾನ ಪ್ರಯಾಣ. ಭಾರವಾದ ಮನಸ್ಸಿನಿಂದ ವಿಮಾನವನ್ನೇರಿದೆ. 27 ರಂದು ಹೊರಡುವುದು ಅನುಮಾನವಿತ್ತು, ಕಾರಣ ನನಗೆ ವಿಮಾನ ಟಿಕೆಟ್ಟಿನಲ್ಲಿ ಗ್ಯಾರಂಟೀ ಸಿಟಿನ ಖಾತರಿ ಇರಲಿಲ್ಲ. 5ನೇ ಅವಕಾಶ ಮಾತ್ರ ಇತ್ತು. ಬರಬೇಕಾದವರು ಬಾರದಿದ್ದರೆ ಈ ಅವಕಾಶ. ಹೀಗಾಗಿ ಕೊನೆ ಘಳಿಗೆಯಲ್ಲಿ ಪ್ರಯಾಣದ ಅವಕಾಶ ನನಗೂ ನನಗಿಂತ ಹಿಂದೆ ಇದ್ದವರಿಗೂ ದೊರೆಯಿತು ರಾತ್ರಿ ಪ್ರಯಾಣ. ಸ್ವಲ್ಪ ಕಾಲ ಪ್ರಕೃತಿಯ ಸೌಂದರ್ಯವನ್ನು ಸವಿದೆನು. ಹೊಟ್ಟೆ ಹಸಿದಿತ್ತು. ಪೂನ ತಲುಪುವುದರೊಳಗೆ ತಿಂಡಿ ದೊರೆಯಿತು, ನಂತರ ದೆಹಲಿ ಸೇರುವುದರೊಳಗೂ ಊಟವು ಸಿಕ್ಕಿತು. ಸಾವಿರಗಟ್ಟಲೆ ವಿಮಾನ ಪ್ರಯಾಣಕ್ಕೆ ಹಣ ತೆತ್ತರೆ ಇಷ್ಟಾದರೂ ಬೇಡವೆ ಎಂದುಕೊಂಡು ಹಸಿವನ್ನು ನೀಗಿಸಿಕೊಂಡೆ. ರಾತ್ರಿ 10ಕ್ಕೆ ದೆಹಲಿ ವಿಮಾನ ನಿಲ್ದಾಣವನ್ನು ತಲುಪಿ ಅಲ್ಲಿ ಬಸ್ ಹಿಡಿದು 11 ಘಂಟೆಗೆ ಸಿ.ಐ.ಟಿ.ಯು ಕಛೇರಿಯನ್ನು ಸೇರಿ ವರದಿಮಾಡಿಕೊಂಡೆನು. ತಡವಾಗಿ ಬಂದ ಕಾಮ್ರೇಡುಗಳ ಜತೆ ಸೇರಿ ರಷ್ಯದ ಎಂಬಸಿಗೆ, ಅಲ್ಲಿಂದ ಏರ್ ಇಂಡಿಯಾಕ್ಕೆ ಮತ್ತು ಅಲ್ಲಿಂದ ಏರೋಫ್ಲೋಟ್‌ಗಳಿಗೆ ಹೋಗಿ ಅಲ್ಲಿಯ ಕೆಲಸಗಳನ್ನು ಮುಗಿಸಿ 31-5-86 ರ ರಾತ್ರಿ 10-30 ದೆಹಲಿಯನ್ನು ಬಿಟ್ಟು ವಿಮಾನದಲ್ಲಿ ಮಾಸ್ಕೋಕ್ಕೆ ಪ್ರಯಾಣ ಮಾಡಲು ವಿಮಾನ ನಿಲ್ದಾಣದಲ್ಲಿ 7 ಗಂಟೆಗೆ ಹಾಜರಿದ್ದು 10-30 ರ ವರೆಗೆ ಡಾಲರ್‌ಎಕ್ಸ್‌ಚೇಂಜ್, ವಿದೇಶಿ ಪ್ರಯಾಣದ ಶುಲ್ಕ ಲಗೇಜುಗಳ ತಪಾಸಣೆ ಇತ್ಯಾದಿಗಳನ್ನು ಮುಗಿಸಬೇಕಾಯಿತು.

ನಾನು ಪಶ್ಚಿಮಬಂಗಾಲದ ಅಜಿತ್ ಮುಖರ್ಜಿ, ಮಹಾರಾಷ್ಟ್ರದ ಯಶವಂತ ಕೋಳಿ, ಕೇರಳದ ಅಬ್ರಹಂ ನಮ್ಮ ತಂಡದ ನಾಯಕರು ಎಲ್ಲರೂ ದೆಹಲಿಯಿಂದ ತಾಷ್ಕೆಂಟ ಮಾರ್ಗ ಮಾಸ್ಕೋ ವಿಮಾನ ನಿಲ್ದಾಣವನ್ನು 1-6-86 ರಂದು ಬೆಳಗ್ಗೆ ಬಂದು ಸೇರಿದೆವು. ವಿಮಾನ ನಿಲ್ದಾಣದಲ್ಲಿ ತಪಾಸಣೆ ಮುಗಿಸಿ ನಾವು ಹೊರ ಬರುವ ಹೊತ್ತಿಗೆ ಶಾಲೆಯ ವ್ಯವಸ್ಥಾಪಕರ ಪೈಕಿ ಇಬ್ಬರು ನಮ್ಮನ್ನು ಎದುರುಗೊಂಡು ಬರಮಾಡಿಕೊಂಡರು. ಈಗ ಇಲ್ಲಿ ಸಮಯ 6.40 ಆಗಿತ್ತು ನಾನು ನನ್ನ ಗಡಿಯಾರ ನೋಡಿದಾಗ ಅದು 7-20 ತೋರಿಸುತ್ತಿತ್ತು. ನನ್ನ ಗಡಿಯಾರದ ಮುಳ್ಳನ್ನೇ ಇಲ್ಲಿಯ ವೇಳೆಗೆ ತಿರುಗಿಸಿದ್ದಾಯಿತು. ಈ ವಿಮಾನ ನಿಲ್ದಾಣದಲ್ಲಿ ಭಾರತದಿಂದ ವಿವಿಧ ಸಂಘಗಳಿಂದ ಬಂದಿದ್ದ 16 ಮಂದಿ ಎಲ್ಲರೂ ತಮ್ಮ ತಮ್ಮ ಸಾಮಾನು ಹೊರೆಗಳಿಗಾಗಿ ಕಾದು ಅದು ನಮ್ಮ ಕೈಗೆ ಬಂದು ಸೇರಿದೊಡನೆಯೇ ನಮಗಾಗಿ ಕಾದಿದ್ದ ಬಸ್ಸಿನಲ್ಲಿ ಮೈಲುಗಟ್ಟಲೆ ಪ್ರಯಾಣ ಮಾಡಿ ಹೊಟೇಲ್ ಸ್ಪುಟ್ನಿಕ್‌ಗೆ ಬಂದು ಸೇರಿದೆವು. ಈಗ ಸಮಯ ಇಲ್ಲಿ 8 ಗಂಟೆಯಾಗಿತ್ತು. ನಮಗೆ ಹೊಟೇಲಿನಲ್ಲಿ ಕೊಠಡಿಗಳು ನಿಗದಿಯಾದ ನಂತರ ನಮ್ಮನಮ್ಮ ಕೊಠಡಿಗಳಿಗೆ ಪ್ರಯಾಣ ಮಾಡಿದೆವು. ನಮ್ಮ ಜತೆಯಲ್ಲಿ ಬಂದಿದ್ದ ದುಭಾಷಿನಿ ಲೀನಾರವರು ಇಲ್ಲಿ ತಿಂಡಿ 9, ಕ್ಕೆ. ನೀವು ನಿಮ್ಮ ಕೊಠಡಿಗಳಲ್ಲಿ ನಿಮ್ಮ ಲಗೇಜುಗಳ ಸೇರಿಸಿ ಇತರೆ ಕೆಲಸಗಳನ್ನು ಮುಗಿಸಿ ಔತಣದ ಅಂಗಣಕ್ಕೆ ಬಂದು ತಿಂಡಿ ಮುಗಿಸಿ ವಿಶ್ರಾಂತಿ ಪಡೆದುಕೊಳ್ಳಿ; ಮಧ್ಯಾನ 1-30ಕ್ಕೆ ಊಟ ಮುಗಿಸಿ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುವ ಎಂದು ತಿಳಿಸಿದರು ಹೊಟೇಲ್‌ನಲ್ಲಿ ನಮ್ಮ ನಮ್ಮ ಕೊಠಡಿಗಳಿಗೆ ಹೋಗುವ ಮುನ್ನ ಎಲ್ಲ ಅತಿಥಿಗಳಿಗೂ ತಲಾ 60 ರೂಬೆಲ್ಲುಗಳನ್ನು ಇಲ್ಲಿಯ ಇತರೆ ಖರ್ಚಿಗಾಗಿ ಕೊಟ್ಟರು. ತಿಂಡಿ ಮುಗಿಸಿ ವಿಶ್ರಾಂತಿಯ ನಂತರ ಊಟ ಮಾಡಿ ಬಸ್‌ನಲ್ಲಿ ಮಾಸ್ಕೋ ನಗರವನ್ನು ಸುತ್ತಾಡಿ ಸಂಜೆ 5-30 ಕ್ಕೆ ಹೊಟೇಲನ್ನು ಬಂದು ಸೇರಿದೆವು.

ಇದು ಲೆನಿನ್ ಪ್ರಾಸ್ಪೆಕ್ಟ್ ರಸ್ತೆಯಲ್ಲಿದೆ. ಹೊಟೇಲ್ ಸ್ಪುಟ್ನಿಕ್ 15 ಅಂತಸ್ತಿನ ಕಟ್ಟಡ. ಈ ಹೊಟೇಲನ್ನು ಟ್ರೇಡ್ ಯೂನಿಯನ್ ಕಾರ್ಯಕರ್ತರ ಉಪಯೋಗಕ್ಕಾಗಿ ಕಾದಿರಿಸಲಾಗಿದೆ ಇಲ್ಲಿ ವಿದೇಶಗಳಿಂದ ಬರುವ ಟಿ. ಯು ಕಾರ್ಯಕರ್ತರು ಉಳಿದುಕೊಳ್ಳುತ್ತಾರೆ ಒಂದೊಂದು ಅಂತಸ್ತಿನಲ್ಲಿ 30 ಸುಸಜ್ಜಿತ ಕೊಠಡಿಗಳಿವೆ. ಈ ಕೊಠಡಿಗಳಲ್ಲಿ ಸದಾ ಬಿಸಿ ನೀರು ಮತ್ತು ತಣ್ಣೀರು ಬರುತ್ತಿರುತ್ತದೆ. ಪ್ರತಿಯೊಂದು ಕೊಠಡಿಯಲ್ಲೂ ಟಿ. ವಿ. ಮತ್ತು ರೇಡಿಯೋಗಳಿರುತ್ತವೆ. ಎರಡು ಹಾಸಿಗೆಯುಳ್ಳ ಅವಶ್ಯಕ ಉಪಕರಣಗಳುಳ್ಳ ಕೊಠಡಿಗಳು. ಮೂರು ಲಿಫ್ಟ್ ಸದಾಕಾಲ ಉಪಯೋಗದಲ್ಲಿರುತ್ತವೆ. ಈ ಹೊಟೇಲನ್ನು ಸದಾಸ್ವಚ್ಛವಾಗಿಡಲು ಬೇಕಾದ ಸಿಬ್ಬಂದಿ ವರ್ಗದ ವ್ಯವಸ್ಥೆ ಇದೆ. ನಾವು ಇಲ್ಲಿಗೆ ಬಂದು ಸೇರಿದಂದಿನಿಂದ ಇಲ್ಲಿಯವರೆವಿಗೂ ಇಲ್ಲಿಯ ಜನರ ನಡತೆ, ಸ್ವಭಾವ, ಅವರ ಆದರ ಮತ್ತು ಅವರ ಮಾನವತೆ ಇವುಗಳನ್ನು ನೋಡಿದಾಗ ನಾವು ಇನ್ನೂ ಎಷ್ಟು ಹಿಂದೆ ಉಳಿದಿದ್ದೇವೆ ಎಂದು ಗೋಚರವಾಗುತ್ತದೆ. ನಾವು ಈ ಹಿಂದುಳಿದಿರುವಿಕೆಯನ್ನು ನಿವಾರಿಸಲೇಬೇಕು ಮತ್ತೂ ನಾವೂ ಬದಲಾಗಬೇಕು.

ತಾ. 2-6-86 ರಂದು ಭಾರತದಿಂದ ಬಂದಿರುವಟ್ರೇಡ್‌ಯೂನಿಯನ್ ಕಾರ್ಯಕರ್ತರಿಗೆ ಒಂದು ತರಬೇತಿಯ ಶಿಬಿರ ಇಲ್ಲಿ ಆರಂಭವಾಯಿತು. ಇದನ್ನು ಆರಂಭಿಸಿದವರು ಕಾ. ಅಲೆಕ್ಸಿಜೆಂಕಿನ್. ನಮಗೆ ತರಬೇತಿ ನೀಡುತ್ತಿರುವ ಶಾಲೆ ಒಂದು ಭವ್ಯ ಕಟ್ಟಡ ಇದರ ಹೆಸರು "High TradeunionSchool Shvernik" ಷೆನಿಂಕ್ ಎಂಬುವರು ಈ ಶಾಲೆಯ ಛೇರ್‌ಮನ್‌ರಾಗಿದ್ದರು. ಅವರ ಹೆಸರನ್ನೇ ಈ ಶಾಲೆಗೆ ಇಟ್ಟಿದ್ದಾರೆ. 1922 ರಿಂದಲೇ ಈ ಶಾಲೆ ಅಸ್ತಿತ್ವದಲ್ಲಿದೆ. 65 ನೇ ವರ್ಷದ ವಾರ್ಷಿಕೋತ್ಸವವನ್ನು ಆಚರಿಸಲಿದ್ದಾರೆ. ಪ್ರಪಂಚದ ಕಾರ್ಮಿಕ ವರ್ಗದ ಕ್ರಾಂತಿಕಾರಿ ನಾಯಕ ಲೆನಿನ್‌ರವರ ನಿರ್ದೇಶನದಂತೆ ಈ ಶಾಲೆ ಸ್ಥಾಪಿತವಾಗಿದೆ, ಟ್ರೇಡ್ ಯೂನಿಯನ್ ಕಾರ್ಯಕರ್ತರನ್ನು ತರಬೇತಿಗೊಳಿಸುವುದೇ ಈ ಶಾಲೆಯ ಮುಖ್ಯೋದ್ದೇಶವಾಗಿದೆ. ಪ್ರಪಂಚದ ನಾನಾಭಾಗಗಳಿಂದಲೂ ಈ ಶಾಲೆಯಲ್ಲಿ ತರಬೇತಿಗೊಳ್ಳಲು ಕಾರ್ಮಿಕ ಮುಖಂಡರು ಆಹ್ವಾನದ ಮೇಲೆ ಇಲ್ಲಿಗೆ ಬರುತ್ತಾರೆ. ವಿಶ್ವವಿದ್ಯಾನಿಲಯದ ಮಟ್ಟದ ಸ್ಥಾನಮಾನಗಳು ಇದಕ್ಕಿದೆ. ಈ ಶಾಲೆಗೆ ವಿದ್ಯಾರ್ಥಿಗಳಾಗಿ ಬರುವವರು ಸೆಕೆಂಡರಿ ಶಾಲೆ ಓದಿರುವವರಾಗಿರಬೇಕು. ಮತ್ತು ಎರಡು ವರ್ಷಗಳ ಕಾರ್ಮಿಕ ಸಂಘದ ಕೆಲಸದ ಅನುಭವವಿರಬೇಕು ಮತ್ತು ಸೇರಲು ಅರ್ಹತೆ ಪಡೆಯಲು ಅವರು ಕೆಲವು ಟೆಸ್ಟುಗಳಲ್ಲಿ ಉತ್ತೀರ್ಣರಾಗಬೇಕು. ವಿದ್ಯಾಭ್ಯಾಸದ ಅವಧಿನಾಲ್ಕು ವರ್ಷ ಗಳಿಕೆ ಮತ್ತು ಕಲಿಕೆ (Learn & Earn) ಯ ಆಧಾರದಲ್ಲಿ ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸಮಾಡಲು ಅವಕಾಶವಿದೆ ರಶ್ಯದ ಮೂಲೆಮೂಲೆಗಳಲ್ಲಿ ಇಲ್ಲಿ ತರಬೇತಿ ಪಡೆದು ಉತ್ತೀರ್ಣರಾದವರು ಕೆಲಸ ಮಾಡುತ್ತಿದ್ದಾರೆ. ಅವರು ಸಮಾಜದಲ್ಲಿ ಗಮನಾರ್ಹ ಬದಲಾವಣೆಯನ್ನು ತರಲು ಸಮರ್ಥರಾಗಿದ್ದಾರೆ. ವಿಶೇಷ ಸಂಗತಿಯೇನೆಂದರೆ ಇಲ್ಲಿಗೆ ವಿದ್ಯಾರ್ಥಿಗಳಾಗಿ ಬರಬಯಸುವವರು ಹುಡುಗರಿಗಿಂತಲೂ ಹುಡುಗಿಯರೇ ಹೆಚ್ಚು ಪ್ರಮಾಣ. 1/3, 2/3 ಹೊರಗಿನಿಂದ ಬರುವ ವಿದ್ಯಾರ್ಥಿಗಳಿಗೆ 1 ತಿಂಗಳಿಂದ 2 ತಿಂಗಳ ಅವಧಿಯ ಶಾಲೆ ಯೋಜನೆ ಮತ್ತು 10 ತಿಂಗಳ ಅವಧಿಯ ಶಾಲೆ ಯೋಜನೆಗಳನ್ನು ಇತ್ತೀಚೆಗೆ ಕೆಲವು ವರ್ಷಗಳಿಂದ ರೂಪಿಸಿಕೊಂಡಿದ್ದಾರೆ. ಇವುಗಳಿಗೆ ವಿಚಾರ ಸಂಕೀರ್ಣಗಳು ಎಂದು ಕರೆಯುತ್ತಾರೆ. ಪ್ರತಿವರ್ಷ 75,000 ವಿದ್ಯಾರ್ಥಿಗಳು ತರಬೇತಿಪಡೆಯುತ್ತಾರೆ ಈಗ ಸುಮಾರು 60 ಲಕ್ಷ ವಿದ್ಯಾರ್ಥಿಗಳ ಸಮೂಹ ರಶ್ಯದಲ್ಲಿ ಕೆಲಸ ಮಾಡುತ್ತಿದೆ. ಕಲಿಕೆ ಮತ್ತು ಮರು ಕಲಿಕೆ ಆಧಾರದಲ್ಲಿ 5 ವರ್ಷಕ್ಕೊಮ್ಮೆ ಈ ಪದ್ಧತಿಯಲ್ಲಿ ವಿದ್ಯಾರ್ಥಿಗಳು ಹೊಸ ಹೊಸ ಪರಿಸ್ಥಿತಿಗಳ ಬಗ್ಗೆ ಅಭ್ಯಾಸ ಮಾಡಿ ತಮ್ಮ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಿಕೊಂಡು ಹೋಗುತ್ತಿರುತ್ತಾರೆ. ಸುಮಾರು 300 ಕ್ಕಿಂತಲೂ ಹೆಚ್ಚು ಪ್ರೊಫೆಸರ್‌ಗಳು ಇಲ್ಲಿ ತರಬೇತಿ ನೀಡುವವರಿದ್ದಾರೆ.

ಅಲೆಕ್ಸ್ ಜೆನ್‌ಕಿನ್‌ರವರು ತಮ್ಮ ಆರಂಭ ಭಾಷಣದಲ್ಲಿ ಈ ಶಾಲೆಯಲ್ಲಿ ಅಂತರಾಷ್ಟ್ರೀಯ ಸಮಸ್ಯೆಗಳ, ಅಭಿವೃದ್ಧಿಗೊಳ್ಳುತ್ತಿರುವ ದೇಶಗಳ ಸಮಸ್ಯೆಗಳ ಮತ್ತು ಅಂತರಾಷ್ಟ್ರೀಯ ಹೊಸ ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ವಿಚಾರಗೋಷ್ಠಿ ನಡೆಯುತ್ತದೆ ಎಂದು ಹೇಳಿ ಸಂಸ್ಥೆಯ ವಿಜ್ಞಾನ ಮುಂದಾಳು ಅಲ್ಲಿ ಅಗ್ರೆನೋವ್ [ಮಹಿಳೆ] ಯವರ ಪರಿಚಯ ಮಾಡಿಕೊಟ್ಟರು. ಶಾಲೆಯ ಪೂರ್ಣಾವಧಿಯ ಕಾರ್ಯಕ್ರಮದ ಪಟ್ಟಿಯ ಪ್ರತಿಯನ್ನು ಎಲ್ಲರಿಗೂ ಕೊಟ್ಟರು.

ಪ್ರಾರಂಭದಲ್ಲಿ ನಮ್ಮೆಲ್ಲರನ್ನೂ ಸ್ವಾಗತಿಸಿದರು. ನಮ್ಮ ದೇಶದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ನಮಗೆ ಹಿತವಚನಗಳನ್ನು ಹೇಳಿ ಎಚ್ಚರಿಕೆಯನ್ನು ಕೊಟ್ಟರು. ಶಿಸ್ತು ಮುಖ್ಯ, ಜನತೆಯನ್ನು ನಾವು ಗೌರವದಿಂದ ಕಾಣುತ್ತೇವೆ. ರಸ್ತೆಯಲ್ಲಿ ಅಸಭ್ಯವರ್ತನೆ ನಡೆಸಿದವರ ಮೇಲೆ ನಮ್ಮ ದೇಶದ ಘಟನೆಯಲ್ಲಿ ತೀವ್ರಕ್ರಮ ಕೈಗೊಳ್ಳಲು ಅವಕಾಶ ಮಾಡಿದೆ ಎಂದು ಹೇಳಿ ನೀವೆಲ್ಲರೂ ನಮ್ಮ ನಿಯಮಗಳನ್ನು ಪರಿಪಾಲಿಸುವಿರೆಂಬ ನಂಬಿಕೆ ನಮಗಿದೆ ಎಂದು ಹೇಳಿದರು.

ಈಗ ನಮಗೆ ಕೊಟ್ಟಿರುವ ಕಾರ್ಯಕ್ರಮದ ಆಧಾರದಲ್ಲಿ ತಾ. 2-6-86 ರಿಂದ ಶಾಲೆಯಲ್ಲಿ ಉಪನ್ಯಾಸ, ಚರ್ಚೆ, ವಿಚಾರ ಸಂಕೀರಣ. ವಿವಿಧ ಸ್ಥಳಗಳಿಗೆ ಭೇಟಿ ಇತರೇ ಕಾರ್ಮಿಕ ಸಂಘಗಳ ಮುಖಂಡರ ನಡುವೆ ವಿಚಾರ ವಿನಿಮಯ, ಸಾಮೂಹಿಕ ಸಂಪರ್ಕ ಇತ್ಯಾದಿಗಳು ನಡೆಯುವದಿದೆ ಈಗ ಪ್ರಾರಂಭ ಮಾತ್ರ.

ಮಾಸ್ಕೊ ಎಂ. ಎಸ್. ಉಗ್ರಪ್ಪ
4-6-86

ಮುಖ್ಯವಿಚಾರಗಳು ಹೀಗಿವೆ.

27ನೇ ಸೋವಿಯತ್ ವರ್ಷದ ಸಮ್ಮೇಳನದ ತೀರ್ಮಾನ

ಪ್ರಪಂಚದಲ್ಲಿ ಶಾಂತಿಗಾಗಿ ಹೋರಾಟ

ಮಾರ್ಕ್ಸ್ ಮತ್ತು ಲೆನಿನ್ ಸಿದ್ಧಾಂತಗಳು

ಸೋವಿಯತ್ ಸಮಾಜದ ಸ್ಥಿತಿ.

ಕೃಷಿ ಕಾರ್ಮಿಕರಿಗೆ ಕೇಂದ್ರ ಮಸೂದೆ ಅಗತ್ಯ

ಕೃಷಿಕಾರ್ಮಿಕರಿಗೆ ಕೇಂದ್ರ ಮಸೂದೆ ಮಂಜೂರಾಗಬೇಕೆಂದೂ, ಕನಿಷ್ಟವೇತನ ನಿರ್ಧರಿಸಲ್ಪಡಬೇಕೆಂದು, 60 ವರ್ಷಕ್ಕೆ ಮೇಲ್ಪಟ್ಟ ಕೃಷಿಕಾರ್ಮಿಕರಿಗೆ ಪಿಂಚಣಿ ಸಿಗಬೇಕೆಂದೂ, ಎಲ್ಲರಿಗೂ ಕುಡಿಯುವ ನೀರು ಮತ್ತು ವಾಸದ ಮನೆಯನ್ನು ಒದಗಿಸಬೇಕೆಂದೂ, ಹರಿಜನರ ಮತ್ತು ಕೃಷಿ ಕಾರ್ಮಿಕರ ಮೇಲಿನ ಅತ್ಯಾಚಾರ ನಿಲ್ಲಬೇಕೆಂದೂ, ನ್ಯಾಯಬೆಲೆಯ ಅಂಗಡಿಗಳ ಮೂಲಕ ಅತ್ಯಾವಶ್ಯಕ ವಸ್ತುಗಳವಿತರಣೆಯಾಗಬೇಕೆಂದೂ, ತಮಿಳುನಾಡಿನ ತಂಜಾವೂರು ಜಿಲ್ಲೆಯ ತ್ರಿವಾರೂರಿನಲ್ಲಿ ಸೇರಿದ ಅಖಿಲ ಭಾರತ ಕೃಷಿಕಾರ್ಮಿಕರ ಯೂನಿಯನಿನ ಕೌನ್ಸಿಲ್ ಸಭೆಯಲ್ಲಿ ನಿರ್ಣಯಿಸಲಾಯಿತು.

19೯8 ಡಿಸೆಂಬರ್ ತಿಂಗಳಲ್ಲಿ ತ್ರಿವಾರೂರ್ ಹತ್ತಿರ ಇರುವ ಕಿಲ್‌ವನ್ ಮಣಿಯಲ್ಲಿ ಭೂಮಾಲಿಕರು ಪುರುಷರು ಮಹಿಳೆಯರು, ಮಕ್ಕಳನ್ನೊಳಗೊಂಡು 44 ಜನರನ್ನು ಸುಟ್ಟು ಹಾಕಿದ್ದರು. ಈ ಜನರಸ್ಮರಣಾರ್ಥ ಸ್ಥಳೀಯ ಗ್ರಾಮ ಪಂಚಾಯತಿ ಸ್ಮರಣ ಸ್ತಂಭವನ್ನೂ, ಸಭಾಂಗಣವನ್ನೂ ನಿರ್ಮಿಸಿದೆ. ಕೌನ್ಸಿಲಿನ ಪರವಾಗಿ ಹರಿಕಿಶನ್‌ಸಿಂಗ್ ಸುರ್ಜಿತ್ ಅವರು ಸ್ಮರಣ ಸ್ಥಂಭಕ್ಕೆ ಪುಷ್ಪಗುಚ್ಛವನ್ನರ್ಪಿಸಿದರು.

ಕೃಷಿಕಾರ್ಮಿಕರ ಸಲುವಾಗಿ ಕೇಂದ್ರ ಸರಕಾರ ಎಮಸೂದೆ ಮಂಜೂರುಮಾಡಬೇಕೆಂದು ಒತ್ತಾಯಿಸಲು ಮನವಿ ಪತ್ರದಲ್ಲಿ ಲಕ್ಷಾವಧಿ ಸಹಿ ಸಂಗ್ರಹ ಮಾಡಲಾಗಿದೆ. ಕೇರಳದಲ್ಲಿ2,23,000 ಕೃಷಿ ಕಾರ್ಮಿಕರು ಸಹಿ ಮಾಡಿದ ಮನವಿಯನ್ನು ರಾಜ್ಯಪಾಲರಿಗೆ ಅರ್ಪಿಸಲಾಗಿದೆ. ಹಲವಾರು ರಾಜ್ಯಗಳಲ್ಲಿ ಈ ರೀತಿಯ ಚಳುವಳಿ ನಡೆಸಲಾಗಿದೆ.

ಗುಡ್ಡಗಾಡು ಜನರ ಮೇಲೆ ಅವ್ಯಾಹತ ದಬ್ಬಾಳಿಕೆ ನಡೆದಿದೆ. 1984-85ರಲ್ಲಿ ಹರಿಜನರಮೇಲೆ 15,555 ದಬ್ಬಾಳಿಕೆಯ ಘಟ್ಟಿಗಳು, 537 ಕೊಲೆಗಳು, 676 ಮಾನಭಂಗದ ಪ್ರಕರಣಗಳು, ಗಿರಿಜನರ ಮೇಲೆ 3985 ದೌರ್ಜನ್ಯದ ಪ್ರಕರಣ, 164 ಕೊಲೆ, 285 ಮಾನಭಂಗದ ಪ್ರಕರಣಗಳು ದಾಖಲಾಗಿವೆ.

ಕೃಷಿ ಕಾರ್ಮಿಕರ ಚಳುವಳಿ ಮೊದಲು ಐದುರಾಜ್ಯಗಳಲ್ಲಿದ್ದು ಈಗ 9 ರಾಜ್ಯಗಳಿಗೆ ಹಬ್ಬಿದೆ. ಮೂರು ಲಕ್ಷದಷ್ಟು ಸದಸ್ಯತ್ವ ಜಾಸ್ತಿಯಾಗಿದೆ. ಈಗ ಒಟ್ಟು ಸದಸ್ಯತ್ವ 11,16,468. ಪ. ಬಂಗಾಲದ ಸಂಖ್ಯೆ ಇದರಲ್ಲಿ ಸೇರಿಲ್ಲ ಅಲ್ಲಿ ಕಿಸಾನ್ ಸಭೆಯಲ್ಲಿಯೇ ಅವರ ಸದಸ್ಯತ್ವವನ್ನು ಸೇರಿಸಲಾಗಿದೆ. ಅದು 25 ಲಕ್ಷದಷ್ಟಿದೆ. ಅದನ್ನು ಸೇರಿಸಿದರೆ ಅಖಿಲ ಭಾರತ ಕೃಷಿಕಾರ್ಮಿಕರ ಸಂಘಟನೆಯಲ್ಲಿ 36 ಲಕ್ಷಕ್ಕಿಂತಲೂ ಹೆಚ್ಚು ಸದಸ್ಯರಿದ್ದಂತಾಯಿತು.

ಕೃಷಿಕಾರ್ಮಿಕರ ಜೀವನ ಪರಿಸ್ಥಿತಿ ಕೆಳಮಟ್ಟಕ್ಕಿಳಿಯುತ್ತಿದ್ದು, 1957ರಲ್ಲಿ ಅವರ ಸಂಖ್ಯೆ 27.31ಮಿಲಿಯಇತ್ತು. 1981ರಲ್ಲಿ ಅದು 55.37 ಮಿಲಿಯದಷ್ಟು ಜಾಸ್ತಿಯಾಗಿದೆ. ರೈತರು ಭೂಮಿ ಕಳೆದುಕೊಳ್ಳುತ್ತಿರುವುದರಿಂದಲೇ ಇಂಥ ಪರಿಸ್ಥಿತಿ ಉಂಟಾಗಿದೆ. ಸಣ್ಣ ರೈತರೂ ಕೂಡ ಇವರ ಸಾಲಿಗೆ ಸೇರುತ್ತಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಪರಿಸ್ಥಿತಿ ಮತ್ತಷ್ಟು ಕೆಡುತ್ತಿದೆ.

ಆದ್ದರಿಂದಕೃಷಿ ಕಾರ್ಮಿಕರ ಬಲಿಷ್ಟ ಸಂಘಟನೆ ಕಟ್ಟಿ ಸಂಯುಕ್ತಹೋರಾಟ ಮುಂದುವರಿಸಬೇಕೆಂದು ಕೌನ್ಸಿಲ್‌ನಲ್ಲಿ ನಿರ್ಣಯಿಸಲಾಯಿತು.

ಪಶ್ಚಿಮ ಬಂಗಾಲದ ಭೂ ಸುಧಾರಣಾ ಕಾನೂನಿಗೆ ರಾಷ್ಟ್ರಾಧ್ಯಕ್ಷರು

(6ನೆಯ ಪುಟಕ್ಕೆ)

ಕೃಷಿ ಕಾರ್ಮಿಕರ ಹೋರಾಟಗಳು

ಕೇರಳ

ಕೃಷಿಕಾರ್ಮಿಕರ ಬೇಡಿಕೆಗಳನ್ನೊಳಗೊಂಡ ಮನವಿಗೆ 2,23,000 ಸಹಿ ಸಂಗ್ರಹ ಮಾಡಲಾಯಿತು. ಬಾಕಿ ಉಳಿದ ಪಿಂಚಣಿಗಳ ನೀಡುವಿಕೆ, ನೆರೆ ಹಾವಳಿಗೆ ತುತ್ತಾದವರಿಗೆ, ಈ ಜನರ ಪರವಾದ ಯೋಜನೆಗಳಿಗಾಗಿ ಮೀಸಲಾಗಿಟ್ಟ ಮೂರು ಕೋಟಿ ರೂ.ಗಳನ್ನು ಖರ್ಚು ಮಾಡದೆ ಅನ್ಯಾಯ ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬ ಬೇಡಿಕೆಗಳಿಗಾಗಿ ರಾಜ್ಯದ ಎಲ್ಲಾ ಗ್ರಾಮಾಧಿಕಾರಿಗಳ ಕಚೇರಿಗಳ ಮುಂದೆ ಧರಣಿ ನಡೆಸಲಾಯಿತು. ಸಂಬಳ ಹೆಚ್ಚಳದ ಸಲುವಾಗಿ ನಡೆದ ಹೋರಾಟದಲ್ಲಿ ರೂ. 3 ರಿಂದ 4 ರ ವರೆಗೆ ಹೆಚ್ಚು ಪಡೆಯಲು ಸಾಧ್ಯವಾಯಿತು. ಬೆಲೆ ಏರಿಕೆಯ ವಿರುದ್ಧ ಏರ್ನಾಕುಲಂ ಜಿಲ್ಲೆ ಒಂದರಲ್ಲೇ 12೭ ಸ್ಥಳಗಳಲ್ಲಿ ಧರಣಿ ನಡೆಸಲಾಯಿತು. ಕೃಷಿಕಾರ್ಮಿಕರಿಗೆ ಮತ್ತು ಬಡವರಿಗೆ 1 ಲಕ್ಷ ಮನೆ ಕಟ್ಟಿಸಿಕೊಡಬೇಕೆಂಬ ಹೋರಾಟ ಯಶಸ್ವಿಯಾಗಿ ನಡೆದು, ಈ ಸಂಘಟನೆಗೆ ಸರಕಾರ ಮಾನ್ಯತೆ ನೀಡುವಂತಾಯಿತು. ಮತ್ತು 7 ಸಾವಿರ ಜನರಿಗೆ ಮನೆ ಒದಗಿಸಲು ಸಾಧ್ಯವಾಯಿತು. ಯೂನಿಯನ್‌ಗೆ ರೂ.50,000 ಸಂಗ್ರಹಿಸಲಾಯಿತು. ಕೇರಳದಲ್ಲಿ ಕೃಷಿ ಕಾರ್ಮಿಕರು ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆ ಯಾವುದೆಂದರೆ ಆಹಾರ ಧಾನ್ಯ ಬೆಳೆಯುವ ಭೂಮಿಯನ್ನು ವ್ಯಾಪಾರಿ ಬೆಳೆಗಾಗಿ ಬದಲಾಯಿಸುವ ಭೂಮಾಲೀಕರ ಕ್ರಮ. ಅದರಿಂದಾಗಿ ಕೃಷಿ ಕಾರ್ಮಿಕರು ನಿರುದ್ಯೋಗಿಗಳಾಗುತ್ತಿದ್ದಾರೆ. ಕುಟ್ಟನಾಡಿನಲ್ಲಿ ತೆಂಗಿನಗಿಡ ಬೆಳೆಸುವ ಪ್ರಯತ್ನವನ್ನು ಯಶಸ್ವಿಯಾಗಿ ತಡೆಯಲು ಸಾಧ್ಯವಾಗಿದೆ.

ಆಂಧ್ರ ಪ್ರದೇಶ

ರಾಜ್ಯದಲ್ಲಿ 23 ಜಿಲ್ಲೆಗಳ ಪೈಕಿ 19 ಜಿಲ್ಲೆ ಬರಗಾಲಕ್ಕೆ ತುತ್ತಾಗಿದ್ದು, ಕೆಲಸ ಕೊಡಿ ಅಥವಾ ಆಹಾರ ಕೊಡಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಿ, ಕಿಲೋಗೆ 2 ರೂ ಯಂತೆ ಹೆಚ್ಚು ಅಕ್ಕಿ ಒದಗಿಸಿ ಎಂಬ ಬೇಡಿಕೆಗಳ ಸಲುವಾಗಿ 1700 ಮಹಿಳೆಯರನ್ನೊಳಗೊಂಡ 22,000 ಜನರು 110 ಮಂಡಲಗಳಲ್ಲಿ ಧರಣಿ ನಡೆಸಿದರು. ಭದ್ರಾಚಲಂ ಜಿಲ್ಲೆಯಲ್ಲಿ ಬೀಡಿ ಎಲೆ ಸಂಗ್ರಹಿಸುವ ಕೆಲಸಗಾರರ ಹೋರಾಟ ನಡೆಸಿ ಸರಕಾರ ನಿರ್ಣಯಿಸಿದ 17ಪೈಸೆ (ಒಂದು ನೂರು ಎಲೆಯ ಕಟ್ಟಿಗೆ) ಯ ಬದಲಾಗಿ 30 ಪೈಸೆ ಪಡೆಯಲು ಸಾಧ್ಯವಾಯಿತು ವಾರಂಗಲ್ ಜಿಲ್ಲೆಯಲ್ಲಿ 25 ಪೈಸೆ ಪಡೆಯಲಾಯಿತು.

ನೆಲ್ಲೂರು ಜಿಲ್ಲೆಯ ನೆಲ್ಲೂರು ಮತ್ತು ಕೋವೂರು ತಾಲ್ಲೂಕುಗಳಲ್ಲಿಯ ಕೆರೆಗಳ 10,000 ಎಕ್ರೆ ಭೂಮಿಯಲ್ಲಿ ಕೃಷಿ ಕಾರ್ಮಿಕರು ಆಹಾರ ಧಾನ್ಯ ಬೆಳೆಸುತ್ತಿದ್ದು, ಸರಕಾರ ಅವರನ್ನು ಹೊರಗೆ ತಳ್ಳುವ ಪ್ರಯತ್ನ ನಡೆಸಿದಾಗ, ಹೋರಾಟ ನಡೆಸಿ 5,000 ಎಕ್ರೆ ಭೂಮಿಯ ಪಟ್ಟಾ ಕೊಡಿಸಲಾಯಿತು. ಸ್ಟಾಂಪ್ ಇಲ್ಲದ ಕಾಗದದ ಪ್ರಕಾರ ಮಾರಾಟವಾದ ಬೇನಾಮಿ ಪ್ರಕರಣಗಳನ್ನೆಲ್ಲ ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಕೋರ್ಟಿನ ತೀರ್ಪಿನ ಪ್ರಕಾರ ಕನಿಷ್ಟ ಮಿತಿ ಕಾನೂನಿಗೆ ತಿದ್ದುಪಡಿ ತರಬೇಕೆಂದು ಯೂನಿಯನ್ ಹೋರಾಟ ನಡೆಸುತ್ತಿದೆ. ಹಾಗಾದ್ದಲ್ಲಿ ಲಕ್ಷಾವಧಿ ಎಕ್ರೆ ಭೂಮಿಯನ್ನು ಹಂಚಬಹುದಾದೆ.

ಕೃಷಿ ಕಾರ್ಮಿಕರ ಸಂಬಳ ಹೆಚ್ಚಳದ ಸಲುವಾಗಿಯೂ ಚಳುವಳಿ ನಡೆದಿದೆ. 2000 ಹಳ್ಳಿಗಳಲ್ಲಿ ಸಾಂಸ್ಕೃತಿಕ ಗುಂಪಿನೊಂದಿಗೆ ಜಾಥಾ ನಡೆಸಲಾಗಿದೆ. ಕಲ್ಯಾಣ ಕೆಲಸಗಳಲ್ಲಿಯೂ ಸಂಘ ಮಧ್ಯ ಪ್ರವೇಶಿಸುತ್ತಿದೆ. ಅಂಥ ಕಾರ್ಯಕ್ರಮಗಳ ಪರಿಣಾಮವಾಗಿ 1500 ಗಳಲ್ಲಿ 2,80,000 ಇದ್ದ ಸದಸ್ಯತ್ವ 2200 ಹಳ್ಳಿಗಳಲ್ಲಿ ಪ್ರಸರಿಸಿ 3,74005 ಸದಸ್ಯತ್ವಕೇರಿದೆ.

ತಮಿಳು ನಾಡು

ಬರಗಾಲ, ವೇತನದಲ್ಲಿ ಹೆಚ್ಚಳ, ಭೂಮಿ ಹಂಚಿಕೆಗಾಗಿ ಹೋರಾಟ ನಡೆಸಲಾಗಿ ಹೋರಾಟದಿಂದಾಗಿ ಕಬ್ಬು ಬೆಳೆಯುವ 5000 ಎಕ್ರೆ ಭೂಮಿಯನ್ನು ಸರಕಾರ ವಶಪಡಿಸಿಕೊಳ್ಳುವಂತೆ ಮಾಡಲು ಸಾಧ್ಯವಾಗಿದೆ. ಕೃಷಿ ಕಾರ್ಮಿಕರಿಗೆ ಆ ಭೂಮಿ ಹಂಚಬೇಕೆಂಬ ಚಳುವಳಿ ಮುಂದುವರಿದಿದೆ. ನಾಲ್ಕು ಜಿಲ್ಲೆಗಳಲ್ಲಿ ಚಟುವಟಿಕೆಗಳು ನಡೆದಿವೆ.

ಪಂಜಾಬ್

ವೇತನ ಹೆಚ್ಚಳದ ಸಲುವಾಗಿ ನಡೆದ ಹೋರಾಟದಲ್ಲಿ ಶೇ 10 ರಿಂದ 15 ರ ವರೆಗೆ ಹೆಚ್ಚು ಸಂಬಳ ಪಡೆಯಲು ಸಾಧ್ಯವಾಗಿದೆ. ಸಿ.ಐ.ಟಿ.ಯು ಜೊತೆಯಲ್ಲಿ ಸೇರಿ, ರೈತರೂ ಕೃಷಿ ಕಾರ್ಮಿಕರೂ, 50 ರಿಂದ 150 ರ ವರೆಗಿನ ಜನರ ಗುಂಪು ಮಾಡಿ ೭500 ಹಳ್ಳಿಗಳಲ್ಲಿ ಸಂಚರಿಸಿದರು. ಕೊನೆ ದಿವಸ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತಪ್ರದರ್ಶನ ನಡೆಸಿದರು. ಅವುಗಳಲ್ಲಿ 30 ರಿಂದ 40 ರಷ್ಟು ಕೃಷಿ ಕಾರ್ಮಿಕರಿದ್ದರು.

ನೀವೂ ಹೀಗೆ ಮಾಡುತ್ತೀರಾ?

ಒಂದು ನೂರು ಸಿ. ಐ. ಟಿ. ಯು ಮೇ ವಿಶೇಷಾಂಕ, ಒಂದು ನೂರು ಸಿ. ನಂಜುಡಪ್ಪನವರು ಬರೆದ ನಿರುದ್ಯೋಗ ಸಮಸ್ಯೆ ಪುಸ್ತಕವನ್ನು ಎಸ್. ಕೆ. ಉಪಾಧ್ಯಾಯರು ಬಿಜಾಪುರದಲ್ಲಿ ಇತ್ತೀಚಿಗೆ 5 ದಿವಸಗಳಲ್ಲಿ ಮಾರಾಟ ಮಾಡಿದರಂತೆ. ಹಲವಾರು ಕೆಲಸಗಳ ಮಧ್ಯ ಅದು ಸಾಧ್ಯವಾಗಿದೆಯಂತೆ. ಈ ವಿಕ್ರಮ ಹೇಗೆ ಸಾಧಿಸಿದ್ದೀರಿ ಎಂದು ಕೇಳಲಾಗಿ, "ನಾಲ್ಕು ರೂ. ಕೊಡಿ, ನಿಮ್ಮ ಬುದ್ಧಿಗೆ ಒಳ್ಳೇ ಆಹಾರ ಒದಗಿಸುತ್ತೇನೆ", "ಮೇ 1 ರಂದು ಕೇಂದ್ರ-ರಾಜ್ಯಸರಕಾರಗಳು ನಿಮಗೆ ರಜೆ ಕೊಟ್ಟವೆ, ನೀವು ಸುಖವಾಗಿ ವಿಶ್ರಾಂತಿ ಪಡೆದಿರಿ. ಯಾಕೆ ಗೊತ್ತೇ. ಅದನ್ನು ತಿಳಿಯಲು ಈ ಪುಸ್ತಕ ಓದಿ" ಎಂದು ಹೇಳಿ ಮೇಲಧಿಕಾರಿಗಳಿಂದ ಹಿಡಿದು ಪೌರಕಾರ್ಮಿಕರ ವರೆಗೆ ಸಾಹಿತ್ಯ ಮಾರಲು ಸಾಧ್ಯವಾಯಿತು. "ನೀನು ಉತ್ತಮ ಕೆಲಸ ಮಾಡಿದಿರಿ. ಮೇ ದಿನಾಚರಣೆಯ ಕುರಿತು ನಮಗೆಲ್ಲ ತಪ್ಪು ತಿಳುವಳಿಕೆಯಿತ್ತು. ಕೆಂಬಾವುಟ ಹಿಡಿದ ಕಮ್ಯುನಿಸ್ಟರ ಕೆಲಸ ಅದೆಂದು ತಿಳಿದಿದ್ದೆವು. ಈಗ ನಮಗೆ ಮೇ ದಿನದ ಅರ್ಥವಾಯಿತು. ಸರಕಾರ ಕೂಡ ಯಾವ ಕಾರಣದಿಂದ ರಜೆ ಕೊಟ್ಟಿದೆಂದು ತಿಳಿಯಿತು" ವಿಶೇಷಾಂಕ ಕೊಂಡವರ ಉದ್ಗಾರಗಳು.

ಕಪ್ಪೆಗೆ ತಾನಿರುವ ಭಾವಿಯೇ ಸರ್ವಜಗತ್ತು. ಹಾಗೆಯೇ ನಮಗೆಲ್ಲ ನಮ್ಮೊಡನಿರುವ ಕಾರ್ಮಿಕರಷ್ಟೇ ನಮ್ಮವರು ಎಂಬ ಭಾವನೆ. ಅದು ಸರಿಯಲ್ಲ. ಕಾರ್ಮಿಕ ಹೋರಾಟದ ಚರಿತ್ರೆಯನ್ನು, ಸಮತಾವಾದದ ಸಿದ್ಧಾಂತಗಳನ್ನು ತಿಳಿಯಬೇಕೆಂಬ ಹಸಿವೆಯಿರುವ ಜನ ಬಹಳ ಇದ್ದಾರೆ. ನಮ್ಮಲ್ಲಿರುವ ಸಂಕುಚಿತ ಭಾವನೆ, ನಾಚಿಕೆಗಳಿಂದಾಗಿ ಜನರ ಮಧ್ಯೆ ಹೋಗಿ, ಸಾಹಿತ್ಯ ಮಾರಾಟ ಮಾಡಿ ಅವರ ಜೊತೆಯಲ್ಲಿ ಚರ್ಚಿಸುವ ಹವ್ಯಾಸ ಇಟ್ಟುಕೊಂಡಿಲ್ಲ. ಇದುವೇ ನಮ್ಮ ಪ್ರಗತಿಗೆ ಅಡ್ಡಗಾಲು. ನಮ್ಮಲ್ಲಿರುವ ಛಳಿಯನ್ನು ತೆಗೆದು ಹಾಕಿ ಜನರ ಮಧ್ಯೆ ಹೋಗೋಣ. ಅವರಿಗೆ ನಮ್ಮ ಸಾಹಿತ್ಯ ಒದಗಿಸೋಣ. ಆದ ನಮ್ಮ ಗೆಳೆಯರ ವೃಂದ ವಿಶಾಲಗೊಳ್ಳುತ್ತದೆ. ಹಾಗೆ ಮಾಡಲು ನೀವು ಸಿದ್ಧರಾಗುತ್ತೀರಾ? ನಿಮ್ಮ ಕಥೆಗಳನ್ನು ಓದುಗರಿಗೆ ಒದಗಿಸುವ ಸಂದರ್ಭ ತಂದುಕೊಡುತ್ತೀರಾ?

—ಸಂಪಾದಕ ಮಂಡಳಿ

ನಾನು ಮತ್ತು ೨೨ ಜೂನ್ ೧೯೪೧

—ಎನ್.ಕೆ. ಉಪಾಧ್ಯಾಯ

22, ಜೂನ್ 1941ರಂದು ಹಿಟ್ಲರನ ನಾಝಿ ಸೈನ್ಯ ಸೋವಿಯತ್ ದೇಶದ ಮೇಲೆ ಆಕ್ರಮಣ ಮಾಡಿದಾಗ ನಾನು ನಾಸಿಕ್ ಜೈಲಿನಲ್ಲಿದ್ದೆ. ನನ್ನ ಜೊತೆಯಲ್ಲಿ ಅಜಯಘೋಷ್, ಎನ್. ಎಲ್. ಉಪಾಧ್ಯಾಯ ಮೊದಲಾದ ಹಿರಿಯ ಮುಖಂಡರಿದ್ದರು. ಕಾಂಗ್ರೆಸ್ಸಿನ ಮುಖಂಡರು ನಮ್ಮ ಜೊತೆಯಲ್ಲಿದ್ದರು.

ನಮ್ಮ ಬಂಧನವಾಗುವುದು ರಾತ್ರಿಯಲ್ಲಿಯೇ ಶತ್ರುಗಳಿಂದ ಧಾಳಿ ನಡೆಯುವುದೂ ಯಾವಾಗಲೂ ರಾತ್ರಿಯಲ್ಲಿಯೇ ಬಂಧನ, ಯುದ್ಧಗಳಂತ ಸುದ್ದಿ ಜೈಲಿನಲ್ಲಿದ್ದ ಕೈದಿಗಳಿಗೆ ತಲುಪಬಾರದೆಂದು ಬ್ರಿಟಿಷ ಸರಕಾರ ಎಷ್ಟೇ ಬಂದೋಬಸ್ತ ಮಾಡಿದ್ದರೂ ಕೂಡ ಹೊರಗಿನ ಎಲ್ಲಾ ಸುದ್ದಿಗಳನ್ನು ತರಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಂಡಿದ್ದೆವು. ಬೆಳಗ್ಗೆ 5 ಗಂಟೆಗೆ ನಮ್ಮ ಕೋಣೆಗಳ ಕೀಲಿ ತೆಗೆದಾಗಲೇ (ಸಂಜೆ 5 ರಿಂದ ಬೆಳಗ್ಗೆ 5 ರ ವರೆಗೆ ಕೀಲಿ ಹಾಕಿ ಕೋಣೆಗಳಲ್ಲಿ ಬಂಧಿಸುತ್ತಿದ್ದರು. ಕೆಲವು ತಿಂಗಳ ನಂತರ ಹೋರಾಟ ಮಾಡಿ ರಾತ್ರಿ 8 ಗಂಟೆಗೆ ಬಂಧಿಸುವಂತೆ ಮಾಡಿಕೊಂಡೆವು) ಜೈಲಿನಲ್ಲೆಲ್ಲ ಹಿಟ್ಲರನ ಬಾಂಬ್ ದಾಳಿಯ ಸುದ್ದಿ ಹರಡಿತ್ತು. ವಿಚಾರ ವಿನಿಮಯ ಚರ್ಚೆ ಪ್ರಾರಂಭವಾಯಿತು ನಮ್ಮ ನಮ್ಮೊಳಗೆ.

1939 ಸೆಪ್ಟೆಂಬರ್ 3 ರಂದು ಹಿಟ್ಲರ್ ಬಹಿರಂಗವಾಗಿಯೇ ಯುದ್ಧ ಘೋಷಿಸಿದ. ಇಂಗ್ಲೆಂಡಿನ ಮೇಲೆ ಬಾಂಬ್ ಸುರಿಮಳೆ, ಫ್ರಾನ್ಸ್ ಮತ್ತಿನ್ನಿತರ ದೇಶಗಳ ಶರಣಾಗತಿ. ಆಫ್ರಿಕಾ ಖಂಡದ ದೇಶಗಳ ಮೇಲೆ ಧಾಳಿ, ಯಾವಕಡೆ, ಪ್ರತಿರೋಧವಿಲ್ಲದೆ ಹಿಟ್ಲರನ ಸೈನ್ಯ ಜಯಭೇರಿ ಹೊಡೆಯುತ್ತ ಮುಂದೆ ಸಾಗಿತು. ಇಟಲಿಯ ಮುಸಲೋನಿ, ಆಫ್ರಿಕಾದ ಮೇಲೂ ಜಪಾನಿನ ಟೋಜೋ ಮಂಚೂರಿಯಾ, ಮಂಗೋಲಿಯಾ, ಚೀನದ ಮೇಲೂ ಆಕ್ರಮಣ ಪ್ರಾರಂಭಿದರು.

ಯುದ್ಧದ ತಯಾರಿ

ಎರಡನೇ ಯುದ್ಧದ ತಯಾರಿ 30 ರ ದಶಕದಿಂದಲೇ ಪ್ರಾರಂಭವಾಗಿತ್ತು. ಆ ಕಾಲ ಘಟ್ಟದಲ್ಲಿ ಸಾಮ್ರಾಜ್ಯಶಾಹಿ ದೇಶಗಳು ಭೀಕರ ಬಿಕ್ಕಟ್ಟನ್ನೆದುರಿಸುತ್ತಿದ್ದವು. ಮಾರ್ಕೆಟಗಾಗಿ ಪೈಪೋಟಿ ಬಿಕ್ಕಟ್ಟು, ದೇಶಗಳ ಮೇಲೆ ಆಕ್ರಮಣ. ಬಿಕ್ಕಟ್ಟಿನ ಸಂಹಾರಕ್ಕೆ ಶಸ್ತ್ರಾಸ್ತ್ರಗಳ ನಿರ್ಮಾಣ, ಯುದ್ಧ ಒಂದೇ ಅವುಗಳಲ್ಲಿ ಉಪಾಯವೆಂದು ತಿಳಿದು ಯುದ್ಧ ಸಿದ್ಧತೆ ಭರದಿಂದ ನಡೆಯುತ್ತಿತ್ತು. ಸಾಮ್ರಾಜ್ಯಶಾಹಿಗಳಲ್ಲಿಯೇ ಎರಡು ಗುಂಪುಗಳಾಗಿ ಜರ್ಮನಿ-ಇಟಲಿ-ಜಪಾನ ಒಂದು ಕೂಟ, ಅಮೇರಿಕ-ಇಂಗ್ಲಂಡ-ಫ್ರಾನ್ಸ್ ಮತ್ತೊಂದು ಕೂಟ, ಅವರೊಳಗೆ ಮಾರ್ಕೆಟಗಾಗಿ, ಹೊಸವಸಾಹತಿಗಾಗಿ ಪೈಪೋಟಿ, 1931 ರಲ್ಲಿ ಜಪಾನ ಮಂಚೂರಿಯವನ್ನು ಆಕ್ರಮಿಸಿತು. ಜರ್ಮನಿ ಇಟಲಿಗಳು ಸೈನಿಕ ಫ್ರಾಂಕೋಣೆ ಸಹಾಯ ನೀಡಿದರು. ಇಟಲಿ ಇಥಿಯೋಪಿಯಾವನ್ನು ಆಕ್ರಮಿಸಿತು. ಯುದ್ಧ ತಯಾರಿ, ಇತರ ದೇಶಗಳ ಆಕ್ರಮಣ ಮುಂದುವರಿಯುತ್ತಿದ್ದಂತೆಯೇ ಬ್ರಿಟನ್, ಫ್ರಾನ್ಸ್, ಜರ್ಮನಿ ಮತ್ತು ಇಟಲಿಯ ಮುಖ್ಯಸ್ಥರು ಮ್ಯೂನಿಚ್‌ನಲ್ಲಿ ಸಭೆ ಸೇರಿ ಝೆಕೊಸ್ಲೊವಾಕಿಯವನ್ನು ಆಕ್ರಮಿಸಿ, ತಮ್ಮೊಳಗೆ ಹಂಚಿಕೊಳ್ಳುವ ಹೊಂಚು ಹಾಕಿದರು.

ಈ ಯುದ್ಧ ಸಿದ್ಧತೆಯನ್ನು ಕಂಡ ಸೋವಿಯತ್ ಕಮ್ಯುನಿಸ್ಟ ಪಕ್ಷ ಇಟಲಿ ಮತ್ತು ಜರ್ಮನಿಯ ಯುದ್ಧ ಸಿದ್ಧತೆಯನ್ನು ಕುಂಠಿತಗೊಳಿಸಿ ಸಾಮೂಹಿಕ ಭದ್ರತೆ ಕಾಪಾಡಲು ಒಂದು ಬಹುಪಕ್ಷೀಯ ಭದ್ರತೆಯ ಪ್ರಸ್ತಾಪವನ್ನೆತ್ತಿತ್ತು. ಆದರೆ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಆ ಸೂಚನೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಯಾಕೆಂದರೆ ಹಿಟ್ಲರ್-ಮುಸೋಲಿನಿ ಮತ್ತು ಟೋಜೋ ತಮ್ಮ ಮೇಲೆ ಆಕ್ರಮಣ ಮಾಡುವುದಿಲ್ಲ. ತಾವು ಸುರಕ್ಷಿತರಾಗುಳಿಯುತ್ತೇವೆ, ಸೋವಿಯತ್ ರಶ್ಯವನ್ನು ನಾಶಮಾಡುವುದೇ ಫಾಸಿಸ್ಟರ ಮೂಲಉದ್ದೇಶವಾಗಿದೆ. ಆದ್ದರಿಂದ ತಮಗೇನೂ ಅಪಾಯವಿಲ್ಲೆಂದು ಅವರು ತಿಳಿದಿದ್ದರು. ಅಮೇರಿಕದ ಸಿನೇಟರ ಆಗಿದ್ದ ಟ್ರೂಮನ್ ಅವರಹೇಳಿಕೆಯೇ ಅದಕ್ಕೆ ಸಾಕ್ಷಿ. "ಜರ್ಮನಿ ಗೆಲ್ಲುವಂತೆ ಕಂಡು ಬಂದರೆ ನಾವು ರಶ್ಯಾಕ್ಕೆ ಸಹಾಯ ಮಾಡಬೇಕು. ರಷ್ಯಾ ಗೆಲ್ಲುವಂತೆ ಕಂಡು ಬಂದರೆ ನಾವು ಜರ್ಮನಿಗೆ ಸಹಾಯ ಮಾಡಬೇಕು. ಈ ರೀತಿ ಎಷ್ಟು ಸಾಧ್ಯವೋ ಅಷ್ಟು ಮಂದಿಯನ್ನು ಅವರು ಕೊಂಡುಕೊಳ್ಳಲಿ". ಇದು ಹ್ಯಾರಿಟ್ರೂಮನ್ನನ ಮಾತುಗಳು.

ಸಾಮ್ರಾಜ್ಯಶಾಹಿಗಳ ಯುದ್ಧ ತಯಾರಿಯನ್ನು ಕಂಡು ಸೋವಿಯತ್ ಕಮ್ಯುನಿಸ್ಟಪಕ್ಷ "ಒಂದು ಹೊಸ ಸಾಮ್ರಾಜ್ಯಶಾಹಿ ಯುದ್ಧ ಕಾಣುತ್ತಿದೆ. ಶಾಂಘಾಯಿಂದ ಜಿಬ್ರಾಲ್ಟರ್ ವರೆಗಿನ ಅಪಾರ ಕ್ಷೇತ್ರವನ್ನಾವರಿಸಿರುವ 50 ಕೋಟಿ ಜನತೆಯುನ್ನೊಳಗೊಂಡಿರುವ ಯುದ್ಧ ಆಗಲೇ ಎರಡನೇ ವರ್ಷಕ್ಕೆ ಕಾಲಿಟ್ಟಿದೆ ಯುರೋಪ ಏಶ್ಯಾ, ಆಫ್ರಿಕಾದ ನಕಾಶೆಯನ್ನು ಬಲಪ್ರಯೋಗದಿಂದ ಬದಲಾಯಿಸುವ ಪ್ರಯೋಗ ನಡೆದಿದೆ." ಎಂದು ಎಚ್ಚರಿಸಿತ್ತು. ಎಚ್ಚರಿಕೆ ನೀಡಿದ 5 ನೇ ತಿಂಗಳಲ್ಲಿ ಬಹಿರಂಗವಾಗಿ ಘೋಷಿಸಿದ ಯುದ್ಧ ಪ್ರಾರಂಭವಾಯಿತು. ಆ ಯುದ್ಧ ಸಾಮ್ರಾಜ್ಯಶಾಹಿ ರಾಷ್ಟ್ರಗಳೊಳಗೆ ಶುರುವಾಯಿತು.

ಅಶಕ್ತ ರಾಷ್ಟ್ರಗಳನ್ನು ಆಕ್ರಮಿಸಿ, ಯುರೋಪ, ಏಶ್ಯಾದಲ್ಲಿ ಸೋವಿಯತ್ ಯೂನಿಯನನ್ನು ಸುತ್ತುವರಿದು, ಅದನ್ನು ಗೆದ್ದು ಜಗತ್ತಿನ ಸಾರ್ವಭೌಮನಾಗುವ ಇಚ್ಛೆಯನ್ನು ಈ ನಾಝಿ ದೊರೆಗಳು ಹೊಂದಿದ್ದರು.

ಬಹಿರಂಗ ಯುದ್ಧ ಸಾಮ್ರಾಜ್ಯಶಾಹಿಗಳೊಳಗೆ ಪ್ರಾರಂಭವಾದರೇ ಅವರ ಮೂಲಗುರಿ ತಮ್ಮ ಮೇಲಿದೆಂದು ಅರಿತ ಸೋವಿಯತ್ ಕಮ್ಯುನಿಸ್ಟ್ ಪಕ್ಷ ಮತ್ತು ಮಾರ್ಶಲ್ ಸ್ಟಾಲಿನ್ ಯುದ್ಧ ತಯಾರಿಗೆ ಕಾಲಾವಕಾಶ ಪಡೆಯಲು ಹಿಟ್ಲರನ ಜೊತೆಯಲ್ಲಿ ಅತಿಕ್ರಮಣ ಒಪ್ಪಂದಮಾಡಿಕೊಳ್ಳಬೇಕಾಯಿತು.

ಇದಕ್ಕೆ ಸಮರ್ಥನೆಯಿದೆ. "ಸದ್ಯ ನಾವು ಇಬ್ಬರು ಶತ್ರುಗಳ ಮಧ್ಯೆನಿಂತಿದ್ದೇವೆ. ಇಬ್ಬರನ್ನೂ ಸೋಲಿಸುವುದು ನಮಗೆ ಸಾಧ್ಯವಾಗದಿದ್ದಲ್ಲಿ ನಮ್ಮ ಶತ್ರುಗಳು ತಂತಮ್ಮೊಳಗೆ ಕಿತ್ತಾಡುವಂತೆ ಮಾಡಲು ನಮಗೆ ಸಾಧ್ಯವಾಗಬೇಕು" ಎಂದು ಲೆನಿನ ಹೇಳಿದ್ದರು.

ಜಗತ್ತಿನಲ್ಲಿ ಉದಯಿಸುತ್ತಿದ್ದ ನಾಝಿವಾದ ಮತ್ತು ಫ್ಯಾಸಿಸಮ್ಮಿನ ಭೂತವನ್ನು ಹೊಡೆದೋಡಿಸಲು ಒಂದು ಫ್ಯಾಸಿಸ್ಟ ವಿರೋಧಿ ಮಿತ್ರಕೂಟ ರೂಪಿಸಿಕೊಳ್ಳುವಂತೆ ಐದು ವರ್ಷಗಳ ಕಾಲ ಬ್ರಿಟಿಷ್, ಫ್ರೆಂಚ್ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳನ್ನು ಒಪ್ಪಿಸುವ ಸತತ ಪ್ರಯತ್ನಗಳು ವಿಫಲವಾದ ಮೇಲಷ್ಟೇ ಸಮಾಜವಾದದ ರಕ್ಷಣೆಗಾಗಿ ಲೆನಿನ ತೋರಿಸಿಕೊಟ್ಟನೀತಿಗನುಸಾರವಾಗಿಯೇ ಸ್ಟಾಲಿನ್ ಅನಾಕ್ರಮಣ ಒಪ್ಪಂದ ಮಾಡಿಕೊಂಡರು. ಅದರಿಂದಾಗಿ ಯುದ್ಧ ಸಿದ್ಧತೆಗೆ ಕಾಲಾವಕಾಶ ದೊರಕಿತು. 1941 ರಲ್ಲಿ ಹಿಟ್ಲರ್ ಅಘೋಷಿತ ಯುದ್ಧ ಸಾರಿದಾಗ ಪರಿಣಾಮಕಾರಿಯಾಗಿ ನಾಝಿಗಳನ್ನೆದುರಿಸಲು ಸಾಧ್ಯವಾಯಿತು.

ಸಾಮ್ರಾಜ್ಯಶಾಹಿ ಯುದ್ಧ

1939 ರಲ್ಲಿ ಹಿಟ್ಲರ ಇಂಗ್ಲೆಂಡಿನ ಮೇಲೆ ಯುದ್ಧ ಸಾರಿದಾಗ ಅದು ಸಾಮ್ರಾಜ್ಯಶಾಹಿಗಳೊಳಗಿನ ಯುದ್ಧವಾಗಿತ್ತು ಆ ಯುದ್ಧದಿಂದ ಇಂಗ್ಲೆಂಡಿನ ಬಲಿ ಕುಂದಿತ್ತು. ಆ ಸಂದರ್ಭವನ್ನು ಪ್ರಯೋಗಿಸಿ ಸಂಪೂರ್ಣ ಸ್ವಾತಂತ್ರ್ಯ ಪಡೆಯುವ ಸಲುವಾಗಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನಾಗಿ ಪರಿವರ್ತಿಸಿ ಚಳುವಳಿ ತೀವ್ರಗೊಳಿಸಬೇಕೆಂದು ಕಮ್ಯುನಿಸ್ಟ ಪಕ್ಷ ಕರೆ ಕೊಟ್ಟಿತು. ಕಾಂಗ್ರೆಸ್ಸಿನ ಸಭೆ ಸಮ್ಮೇಳನಗಳಲ್ಲಿ ಜಾಹೀರ ಸಭೆಗಳಲ್ಲಿ ಆ ಸಾಮ್ರಾಜ್ಯಶಾಹಿ ಯುದ್ಧದ ಸದುಪಯೋಗ ಮಾಡಿಕೊಳ್ಳಬೇಕೆಂದು ಪ್ರಚಾರ ಮಾಡುತ್ತಿದ್ದೆವು. ಪಕ್ಷದ ಮುಖಪತ್ರ ನ್ಯಾಶನಲ್ ಫ್ರಂಟ ಕೂಡ ಬಲವಾದ ಪ್ರಚಾರ ಪ್ರಕ್ಷೋಭೆ ನಡೆಸಿತು. ಕಾಂಗ್ರೆಸ್ಸಿನೊಳಗೂ ಸ್ವಾತಂತ್ರ್ಯ ಪ್ರೇಮಿಗಳ ಮಧ್ಯೆ ನಮ್ಮ ಪಕ್ಷದ ಪ್ರಚಾರದ ಪ್ರಭಾವ ಹೆಚ್ಚಿದಾಗ 1940ರ ಪ್ರಾರಂಭದಿಂದಲೇ ಬ್ರಿಟಿಷ ಸರಕಾರ ಕಮ್ಯುನಿಸ್ಟರನ್ನು ಬಂಧಿಸಿ ಸ್ಥಾನಬದ್ಧತೆಯಲ್ಲಿಡಲು ಪ್ರಾರಂಭಿಸಿತು. ಕಾಂಗ್ರೆಸ್ ಮುಖಂಡರನ್ನೂ ಬಂಧಿಸಲಾಯಿತು. 1940 ರಲ್ಲಿ ಸಾವಿರಾರು ಜನ ಬಂಧನಕ್ಕೊಳಗಾದರು. ಆದರೂ ಹೊರಗೆ ನಮ್ಮ ಪಕ್ಷದ ಪ್ರಚಾರ-ಪ್ರಕ್ಷೋಭೆ ಮುಂದುವರಿಯಿತು.

ಜನತಾ ಯುದ್ಧ

1941ರಲ್ಲಿ ಹಿಟ್ಲರ್ ರಶ್ಯಾ ದೇಶದ ಮೇಲೆ ಆಕ್ರಮಣ ನಡೆಸಿದಾಗ ದೇಶದ ಹಲವಾರು ಜೈಲುಗಳಲ್ಲಿ ಸ್ಥಾನಬದ್ಧರಾಗಿದ್ದ ಸಂಗಾತಿಗಳೊಳಗೆ ಭೂಗತರಾಗಿದ್ದ ಕಾಮ್ರೇಡಗಳ ಮಧ್ಯೆಯೂ ಸುದೀರ್ಘ ಚರ್ಚೆ ನಡೆಯಿತು. ಹೊರಗಿನವರ ಅಭಿಪ್ರಾಯ ಒಳಗಿನವರಿಗೂ, ಒಳಗಿನವರ ಅಭಿಪ್ರಾಯ ಹೊರಗಿನವರಿಗೂ ಲಭ್ಯವಾಗುವಂಥ ವ್ಯವಸ್ಥೆ ಮಾಡಲಾಯಿತು. 5-6 ತಿಂಗಳು ವಿಚಾರ ಮಂಥನ ನಡೆಯಿತು.

ಸೋವಿಯೆತ್ ರಶ್ಯದ ಮೇಲೆ ಹಿಟ್ಲರನ ಆಕ್ರಮಣ ನಡೆದ ನಂತರ ಜಪಾನ ಮಂಗೋಲಿಯಾ, ಚೀನಾ ಹಾಗೆಯೇ ಇತರ ದೇಶಗಳ ಮೇಲೆ ತೀವ್ರ ಆಕ್ರಮಣ ನಡೆಸಿ ರಶ್ಯಾದ ಮೇಲೆ ಬೀಳುವ ಸಂಭವವಿರುವುದು ಕಂಡು ಬಂತು. ಹಾಗಾದಲ್ಲಿ ಪ್ರಥಮ ಸಮತಾವಾದಿ ದೇಶ ನಾಝಿಗಳ ವಶವಾದರೆ ಜಗತ್ತಿನ ಸ್ವಾತಂತ್ರ್ಯ ಪ್ರೇಮಿ ಜನರನ್ನು ರಕ್ಷಿಸುವ ಶಕ್ತಿಯೇ ಇಲ್ಲದಂತಾಗಿ ಇಡೀ ಜಗತ್ತು ನಾಝಿಗಳ-ಫ್ಯಾಸಿಸ್ಟರ ಬೂಟುಗಾಲಿನಡಿಯಲ್ಲಿ ಗುಲಾಮರಾಗಿ ನರಳಬೇಕಾಗುತ್ತದೆ. ಆದ್ದರಿಂದ ರಶ್ಯಾದೇಶದ ಮೇಲಿನ ಮೇಲಿನ ಆಕ್ರಮಣ, ಯುದ್ಧ ಎರಡನೇ ಮಹಾಯುದ್ಧದಲ್ಲಿ ಗುಣಾತ್ಮಕವಾದ ಬದಲಾವಣೆಯನ್ನುಂಟು ಮಾಡಿದೆ. ಇಷ್ಟು ವರ್ಷ ಸಾಮ್ರಾಜ್ಯಶಾಹಿಗಳೊಳಗೆ ನಡೆದ ಯುದ್ಧ ಈಗ ನಾಝಿಗಳು ಮತ್ತು ಸಮತಾವಾದಿ ದೇಶದ ಮಧ್ಯೆ ನಡೆಯುವ ಯುದ್ಧವಾಗಿ ಪರಿವರ್ತನೆಗೊಂಡಿದೆ. ಸೋವಿಯತ್ ದೇಶವನ್ನು ರಕ್ಷಿಸುವುದು ಪ್ರತಿಯೊಬ್ಬ ದೇಶಪ್ರೇಮಿಯ ಕರ್ತವ್ಯವೆಂದು ಹೇಳಿ "ಸಾಮ್ರಾಜ್ಯ ಶಾಹಿಯುದ್ಧ" ವನ್ನು "ಜನತಾ ಯುದ್ಧ"ವನ್ನಾಗಿ ಪರಿಗಣಿಸಬೇಕೆಂಬ ನಿರ್ಣಯವನ್ನು ಕಮ್ಯುನಿಸ್ಟ ಪಕ್ಷ ಕೈಗೊಂಡಿತು. ಆ ಕಾರಣದಿಂದ ಸೋವಿಯತ್ ದೇಶಕ್ಕೆ ಬೆಂಬಲನೀಡಲು ನಾಜಿಗಳ ಕೂಟವನ್ನು ವಿರೋಧಿಸಲು ಬ್ರಿಟಿಷ ಸರಕಾರ ಮುಂದೆ ಬಂದುದರಿಂದ, ರಶ್ಯಾ ಇಂಗ್ಲೆಂಡ-ಅಮೇರಿಕ ದೇಶಗಳ ಒಕ್ಕೂಟ ರಚಿಸಲ್ಪಟ್ಟಿರುವುದರಿಂದ ಫ್ಯಾಸಿಸ್ಟ ವಿರೋಧಿ ಸೈನಿಕರಿಗೆ ಸಹಾಯ ನೀಡಲು ನಾಝಿಯನ್ನು ಸೋಲಿಸಲು ಜನತಾ ಯುದ್ಧಕ್ಕೆ ಸಹಾಯಮಾಡಬೇಕೆಂದು ಪಕ್ಷ ಘೋಷಿಸಿತು. ಆ ನಿಲುವೆಯಿಂದ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಜನರಲ್ಲಿ ತಪ್ಪು ಅಭಿಪ್ರಾಯ ಉಂಟಾಗಬಹುದೆಂಬ ಸಂಶಯ ನನ್ನಲ್ಲಿ ಹಾಗೂ ಇತರ ಹಲವಾರು ಸಂಗಾತಿಗಳಲ್ಲಿತ್ತು. ಆದರೆ ಸೋವಿಯತ್ ದೇಶ ಸೋತು ಇಡೀ ಜಗತ್ತೆ ಹಿಟ್ಲರನ ಕೈವಶವಾದರೆ ಭಾರತ ದೇಶದ ಸ್ವಾತಂತ್ರ್ಯದ ಪ್ರಶ್ನೆಯೇ ಇಲ್ಲದಂತಾಗುತ್ತದೆ. ಬ್ರಿಟಿಷರ ಆಳಿಕೆಯಲ್ಲಾದರು ಚಳುವಳಿ ಹೂಡುವ ಹಕ್ಕು ನಮಗಿದೆ. ಹಿಟ್ಲರ್ ಅಧಿಕಾರಕ್ಕೆ ಬಂದದ್ದಾದರೆ ಆ ಹಕ್ಕೂ ನಮಗುಳಿಯುವುದಿಲ್ಲ ಅತ್ಯಂತ ಕ್ರೂರ ದಬ್ಬಾಳಿಕೆಯನ್ನೆದುರಿಸಬೇಕಾಗುತ್ತದೆ. ಹಿಟ್ಲರ್ ಸೋತು ಕೆಂಪುಸೇನೆ ಗೆದ್ದರೆ ಜಗತ್ತಿನಲ್ಲಿ ಸಮತಾವಾದಿ ಶಕ್ತಿ, ಸ್ವಾತಂತ್ರ್ಯಪ್ರಿಯರ ಶಕ್ತಿ, ಪ್ರಜಾಪ್ರಭುತ್ವ ಶಕ್ತಿ ಬಲಗೊಂಡಂತಾಗುತ್ತದೆ. ಅಂತ ಶಕ್ತಿಗಳ ಬೆಂಬಲ, ಸಹಕಾರ, ಸಹಾಯದಿಂದ ಸ್ವಾತಂತ್ರ್ಯವನ್ನು ಪಡೆಯಲು ನಮಗೆ ಸುಲಭವಾಗುತ್ತಿದೆ. ಆ ಅಂಶಗಳೆಲ್ಲ ನಮ್ಮ ಮನಸ್ಸಿನಲ್ಲಿ ನಾಟಿದ ನಂತರ ನಮ್ಮಲ್ಲಿಯ ಸಂಶಯ ದೂರವಾಯಿತು. ಪಕ್ಷದ ನಿಲುವೆಯ ಅರ್ಥವಾಯಿತು.

1942 ರ ಮಧ್ಯದಲ್ಲಿ ಜೈಲಿನಿಂದ ಬಿಡುಗಡೆಯಾದ ನಂತರ ನಾನು ಹಾಗೆಯೇ ಇತರ ಸಂಗಾತಿಗಳು ಜನರ ಮಧ್ಯೆ ಕೆಲಸ ಪ್ರಾರಂಭಿಸಿದಾಗ ಜನರಿಗೆ ಪಕ್ಷದ ನಿಲುವೆಯ ಅರ್ಥವಾಗುತ್ತಿರುವುದನ್ನು ಕಂಡೆವು. ಕೆಲವರೆಲ್ಲಿ "ಕಮ್ಯುನಿಸ್ಟರು ಬ್ರಿಟಿಷರ ಏಜಂಟರ,

(6ನೆಯ ಪುಟಕ್ಕೆ)

ನಾಝೀ ಆಕ್ರಮಣದ ವಿರುದ್ಧ ಹೋರಾಡಿದ ಕೆಂಪುಸೇನೆಗೆ ಅಭಿನಂದನೆಗಳು

ಸೋವಿಯತ್ ಯೂನಿಯನ್ನಿನ ಮಹಾ ದೇಶಪ್ರೇಮಿ ಯುದ್ಧದಲ್ಲಿ (1941-45) ಜಯಗಳಿಸಿದ ಸೋವಿಯತ್ ಜನತೆಗೆ, ಸ್ವಾತಂತ್ರ್ಯದ ರಕ್ಷಣೆಗಾಗಿ, ಮೂರನೇ ಮಹಾಯುದ್ಧದ ವಿರುದ್ಧವಾಗಿ ಹೋರಾಡುತ್ತಿರುವ ವಿಶ್ವದ ಜನತೆ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಸೋವಿಯತ್ ಯೂನಿಯನ್ನಿನ ಜೊತೆಯಲ್ಲಿ ಅನಾಕ್ರಮಣ ಒಪ್ಪಂದ ಮಾಡಿಕೊಂಡಿದ್ದ ಹಿಟ್ಲರ್ ಸಮತಾವಾದಿ ಸೋವಿಯತ್ ಯೂನಿಯನನ್ನು ನಾಶ ಮಾಡಿ ಇಡೀ ಜಗತ್ತನ್ನು ತನ್ನ ನಾಝಿ ಆಡಳಿತೆಗೊಳಪಡಿಸಿ ಜಗತ್ತಿನ ಏಕೈಕ ಸಾರ್ವಭೌಮನಾಗಿ ಮೆರೆಯುವ ಕನಸನ್ನು ಕೆಂಪು ಸೈನ್ಯ ಮತ್ತು ಸೋವಿಯತ್ ಜನತೆ ಮಣ್ಣುಗೂಡಿಸಿದೆ. 1941 ಜೂನ 22 ರಂದು ಹಿಟ್ಲರ್ ಸೋವಿಯತ್ ರಶ್ಯದ ಮೇಲೆ ಆಕ್ರಮಣ ಮಾಡುವ ಮೂರ್ಖತನದ ನಿರ್ಧಾರ ಕೈಗೊಳ್ಳದಿದ್ದರೆ ಇಂದಿನ ಜಗತ್ತಿನ ಭೂಪಟ ಹೇಗಿರುತ್ತಿತ್ತೊ ಎಂದು ಹೇಳುವುದು ಕಷ್ಟ. ಆದರೆ ಜೂನ್ 22 ರಂದು ನಾಝಿಗಳು ಸೋವಿಯತ್ ದೇಶದ ಮೇಲೆ ನಡೆಸಿದ ಆಕ್ರಮಣ, ಕೆಂಪು ಸೈನ್ಯದ ಗೆಲುವಿನಿಂದಾಗಿ ಗುಲಾಮಗಿರಿಯ ತುಳಿತದಿಂದಾಗಿ ನರಕ ಯಾತನೆಗೊಳಪಟ್ಟಿದ್ದ ಜಗತ್ತಿನ ಬಹಳಷ್ಟು ರಾಷ್ಟ್ರಗಳನ್ನೂ, ಜಗತೆಯನ್ನೂ ಸಮತಾವಾದದ, ಸ್ವಾತಂತ್ರ್ಯದ ಪಣಿನೆರಳಲ್ಲಿ ಉಸಿರಾಡುವಂತೆ ಮಾಡಿದೆ. ಆದ್ದರಿಂದ 1941, ಜೂನ 22 ಜಗತ್ತಿನ ಸ್ವಾತಂತ್ರ್ಯಪ್ರೇಮಿ ಜನರಿಗೆ ಅತ್ಯಂತ ಮಹತ್ವದ ದಿನವಾಗಿತ್ತು. ಹಿಟ್ಲರನ ಸೋಲಿನ ನಾಂದಿಯಾಗಿತ್ತು.

"ಸಮತಾವಾದದ ಲಕ್ಷಣಗಳು, ಸೋವಿಯತ್ ಜನತೆಯ ಜೀವನ ಪದ್ಧತಿ, ಮಹಾದೇಶಾಭಿಮಾನಿ ಯುದ್ಧದ ಜನಾದರಣೀಯ ರಾಷ್ಟ್ರೀಯ ಗುಣಮಟ್ಟವೇ ವಿಜಯದ ಮೂಲವಾಗಿದೆ. ಅತಿ ತೀವ್ರ ಪರೀಕ್ಷೆಗೊಳಪಟ್ಟ ಯುದ್ಧ ಒಂದು ವಿಜಯವನ್ನು ಪೂರ್ಣವಾಗಿ ಮತ್ತು ಪ್ರಭಾವಿತವಾಗಿ ತೋರ್ಪಡಿಸಿದೆ. ಅದೇನೆಂದರೆ ಖ್ಯಾತಿ ಪಡೆದ ಜನತೆಯೇ ಚರಿತ್ರೆಯ ಪ್ರಭಾವಶಾಲಿ ಶಕ್ತಿ; ನಮ್ಮ ಸಿದ್ಧಾಂತ ಮತ್ತು ಸದಾಚಾರದ ವಿಜಯ ಅದು; ಮಾನವನನ್ನೇ ದ್ವೇಷಿಸುವ ತತ್ವವನ್ನು ಧಿಕ್ಕರಿಸಿ ಮಾನವತಾವಾದ ಹಾಗೂ ನ್ಯಾಯದ ಉಚ್ಚ ಮೂಲ ತತ್ವದ ವಿಜಯವೇ ಅದಾಗಿದೆ" ಎಂದು ಸೋವಿಯತ್ ಕಮ್ಯುನಿಸ್ಟ ಪಕ್ಷದ ಪ್ರ. ಕಾರ್ಯದರ್ಶಿ ಗೋರ್ಬಚೆವ್ ಅವರು ಹೇಳಿದ್ದಾರೆ.

ಫ್ಯಾಸಿಸ್ಟ ದಂಗೆಕೋರರನ್ನು ಹೊಡೆದೋಡಿಸುವುದರಲ್ಲಿ ಮತ್ತು ಜಗತ್ತನ್ನು ಕಂದುಬಣ್ಣದ ಪ್ಲೇಗಿನಿಂದ ಉಳಿಸುವುದರಲ್ಲಿ ಜಗತ್ತಿನ ಪ್ರಥಮ ರಾಷ್ಟ್ರವಾದ ಸೋವಿಯತ್ ಯೂನಿಯನ್ನಿನ ಪ್ರಯತ್ನವೇ ಮೂಲ ಕಾರಣವಾಗಿದೆಂಬುದನ್ನು ಚರಿತ್ರೆ ತೋರಿಸಿಕೊಟ್ಟಿದೆ. ಸೋವಿಯತ್ - ಜರ್ಮನ್ ಗಡಿಯಲ್ಲಿಯೇ ಹಿಟ್ಲರನ ಬಹುಸಂಖ್ಯ ಸೈನ್ಯವನ್ನು ಉಪಯೋಗಿಸಲಾಗಿತ್ತು. ಈ ರಂಗದಲ್ಲಿಯೇ ನಾಝಿ ಸೈನ್ಯ ಶೇ. 75 ರಷ್ಟು ಹಾನಿಗೊಳಗಾಯಿತು ಶೇ.75 ರಷ್ಟು ಟ್ಯಾಂಕ, ಯುದ್ಧ ವಿಮಾನ, ಕೈಶಸ್ತ್ರಗಳನ್ನು ಕಳಕೊಂಡಿತು. 1941 ವಸಂತ ಋತುವಿನಲ್ಲಿಯೇ ನಾಝಿ ಸೈನ್ಯದ "ಅಜೇಯ"ತೆ ಬಯಲಾಯಿತು ಪಶ್ಚಿಮ ದಿಕ್ಕಿನಲ್ಲಿ ತನಗೆ ದೊರೆತ ವಿಜಯದಿಂದ ಮೈಮರೆತ ಹಿಟ್ಲರನ ಮಿಲಿಟರಿ ವ್ಯೂಹರಚನಾಗಾರರು ಪೂರ್ವದಲ್ಲಿ ಕೂಡ "ಬ್ಲಿಟ್ಸಕ್ರಿಗ್" (ಮಿಂಚಿನ ಆಕ್ರಮಣ) ಮೂಲಕ ಜೂಜಾಟಕ್ಕೆ ಧುಮುಕಿದರು.

(ಬ್ರಿಟ್ಸಕ್ರಿಗ್ ಅಂದರೆ ತನ್ನ ಯುದ್ಧದ ಎಲ್ಲಾ ಸಾಧನೆಗಳನ್ನು ಯುದ್ಧ ವಿಮಾನ, ಟ್ಯಾಂಕ, ಕಾಲ್ದಳಗಳನ್ನೆಲ್ಲ ಒಂದೇ ಸಲ ಆದಷ್ಟು ಹೆಚ್ಚು ಪ್ರದೇಶಗಳಲ್ಲಿ ವಾಯುವೇಗದಲ್ಲಿ ಆಕಸ್ಮಿಕವಾಗಿ ಉಪಯೋಗಿಸಿ ಉಪಯೋಗಿಸಿ ಶತ್ರುವಿನ ಸೈನ್ಯದಲ್ಲಿ ಭಯಭೀತಿಯನ್ನುಂಟು ಮಾಡುವುದು) ಜರ್ಮನಿಯ ಹಾಗೂ ಯುರೋಪಿನಲ್ಲಿ ತಾನು ಗೆದ್ದ ಎಲ್ಲ ರಾಷ್ಟ್ರಗಳ ಮಿಲಿಟರಿ ಮತ್ತು ಸಂಪನ್ಮೂಲಗಳನ್ನೆಲ್ಲ ಪೂರ್ತಿಯಾಗಿ ಸೋವಿಯತ್ ರಶ್ಯದ ಮೇಲೆ ಏರಿ ಹೋಗುವಂತೆ ಮಾಡಿದರು. ಸೋವಿಯೂನಿಯನನ್ನು ಬಿಟ್ಟು ಜಗತ್ತಿನ ಬೇರೆ ಯಾವ ರಾಷ್ಟ್ರವೂ ಕೂಡ ಅಷ್ಟು ಭೀಕರವಾದ ಧಾಳಿಯನ್ನೆದುರಿಸುವ ಸಾಮರ್ಥ್ಯ ಹೊಂದಿರಲಿಲ್ಲ ಯುದ್ಧದ ಪ್ರಾರಂಭದಲ್ಲಿಯ ಭೀಕರ ಅನುಭವ ಕೆಂಪು ಸೈನ್ಯದ ಹೋರಾಟದ ಸ್ಫೂರ್ತಿಯಲ್ಲಿ ಬಿರುಕುಂಟು ಮಾಡಲಿಲ್ಲ. ತಮ್ಮ ನ್ಯಾಯವಾದ ಗುರಿಯನ್ನು ಸಾಧಿಸಿಯೆ ತೀರುತ್ತೇವೆಂಬ ಅವರಲ್ಲಿಯ ದೃಢ ವಿಶ್ವಾಸ ಕಂಪಿಸಲಿಲ್ಲ.

ರಣರಂಗದ ತೀವ್ರತೆ, ವ್ಯಾಪ್ತಿ, ವಿಶಾಲತೆಯಲ್ಲಿ ಸೋವಿಯತ್-ಜರ್ಮನ್ ಎರಡನೇ ಮಹಾಯುದ್ಧದ ಇತರ ಎಲ್ಲಾ ರಂಗಗಳಿಗಿಂತ ಅತಿ ದೊಡ್ಡದಾಗಿದ್ದಿತು. ಅದರ ಉದ್ದಳತೆ 6000 ಕಿಲೋಮಿಟರ. ಉತ್ತರ ಆಫ್ರಿಕಾ, ಇಟಲಿ, ಪಶ್ಚಿಮ ಯುರೋಪುಗಳ ರಂಗಕ್ಕಿಂತಲೂ ಹಲವಾರು ಪಟ್ಟು ಜಾಸ್ತಿಯಾಗಿದ್ದವು. ಯುರೋಪ ಮತ್ತು ಆಫ್ರಿಕಾದಲ್ಲಿ ನಡೆದ ಯುದ್ಧಕ್ಕಿಂತಲೂ ನಾಲ್ಕರಷ್ಟು ಹೆಚ್ಚು ದಿವಸ 1418 ದಿನಗಳ ಕಾಲ ಅಲ್ಲಿ ಯುದ್ಧ ನಡೆಯಿತು. 1944 ರ ಬೇಸಿಗೆ ಕಾಲದ ವರೆಗೆ ಅಂದರೆ ಪಾಶ್ಚಿಮಾತ್ಯ ಗೆಳೆಯ ರಾಷ್ಟ್ರಗಳು (ಅಮೇರಿಕ, ಇಂಗ್ಲಂಡ ಮೊದಲಾದವು) ಯೂರೋಪಿನಲ್ಲಿ ಎರಡನೇ ರಂಗ ಪ್ರಾರಂಭಿಸುವ ತನಕ ಜರ್ಮನಿ ಮತ್ತು ಅದರ ಬೆಂಬಲಿಗರು ಪೂರ್ವ ರಂಗದಲ್ಲಿ ತಮ್ಮ ಇಡೀ ಸೈನ್ಯದ 70 ರಷ್ಟು ಅಂದರೆ 270 ಡಿವಿಜನುಗಳನ್ನು ಯುದ್ಧದಲ್ಲಿ ಹೂಡಿದ್ದರು.

ಈ ಮಹಾ ದೇಶಪ್ರೇಮಿ ಯುದ್ಧದಲ್ಲಿ ಪ್ರಥಮ ಸಮತಾವಾದಿ ರಾಷ್ಟ್ರದ ಅಜೇಯತೆಯನ್ನೂ ನೈಪುಣ್ಯತೆಯನ್ನು ಜಗಜ್ಜಾಹೀರಗೊಳಿಸಿತು. ಅಕ್ಟೋಬರ ಕ್ರಾಂತಿಯಿಂದ ಉದ್ಭವಿಸಿದ ಹೊಸ ಸಾಮಾಜಿಕ-ರಾಜಕೀಯ ಪದ್ಧತಿಯ, ಸಮತಾವಾದಿ ಆರ್ಥಿಕತೆಯ, ಮಾರ್ಕ್ಸವಾದ-ಲೆನಿನ್‌ವಾದ ಸಿದ್ಧಾಂತದ ಸಮಾಜವಾದಿ ಸಮಾಜದ ನೈತಿಕ-ರಾಜಕೀಯ ಐಕ್ಯತೆಯ ಹಾಗೆಯೇ ಸೋವಿಯತ್ ಜನತೆಯ ಉಕ್ಕಿನಂತ ಮೈತ್ರಿಯ ದ್ಯೋತಕವಾಗಿದೆ ಆ ವಿಜಯ. ಸೋವಿಯತ್ ಸೈನಿಕ ಕಲೆಯ ನಿರ್ವಿವಾದ ಶ್ರೇಷ್ಟತೆಯನ್ನು ಅದು ಪ್ರದರ್ಶಿಸಿದೆ.

ಸೋವಿಯತ್ ದೇಶದ ಮೇಲಿನ ಆಕ್ರಮಣದ ಒಳಸಂಚು ಮಾಡುವಾಗ ತಮ್ಮ ಮಿಂಚಿನ ದಾಳಿಯಿಂದ ರಶ್ಯದ ಸೈನ್ಯವನ್ನು ಸೋಲಿಸಿ ಟ್ರಾನ್ಸಕೇಸಿಯಾದ ಮೂಲಕ ಮಧ್ಯಪೂರ್ವದ ದೇಶಗಳಿಗೆ ನುಗ್ಗಬಹುದೆಂಬ ಮಹತ್ವಾಕಾಂಕ್ಷೆಯನ್ನು ಫ್ಯಾಸಿಸ್ಟರು ಹೊಂದಿದ್ದರು. ಕೆಲ ಸಮಯದ ನಂತರ ಹಿಟ್ಲರನ ಯುದ್ಧವ್ಯೂಹ ತಯಾರಕರು ಅರಬ್ ರಾಷ್ಟ್ರಗಳನ್ನೂ, ಇರಾನ್, ಅಫಗಾನಿಸ್ಥಾನವನ್ನು ಜಯಿಸಿಕೊಳ್ಳುವ ಹೊಂಚು ಹಾಕಿದ್ದರು. ಸೋವಿಯತ್ ಯೂನಿಯನಿನ ಮೇಲೆ ಆಕ್ರಮಣ ಮಾಡುವ ನಾಲ್ಕು ತಿಂಗಳ ಮುಂಚೆ ಅಫಗಾನಿಸ್ಥಾನದ ಮೂಲಕ ಭಾರತ ದೇಶದ ಮೇಲೆ ಸವಾರಿ ಮಾಡಲು ಸುವ್ಯವಸ್ತಿತ ಯೋಜನೆಗಳನ್ನು ತಯಾರಿಸುವಂತೆ ಆಜ್ಞೆ ಮಾಡಿದ ಹಿಟ್ಲರ್.

ಅದೇ ಸಮಯದಲ್ಲಿ ಜಪಾನ-ಜರ್ಮನಿ ಇಟಲಿ (ಟೋಜೋ-ಹಿಟ್ಲರ್-ಮುಸ್ಸೊಲೊನಿ) ಇವರೊಳಗೆ ಮಿಲಿಟರಿ-ರಾಜಕೀಯ ಒಪ್ಪಂದವಾಗಿತ್ತು. ಆ ಒಪ್ಪಂದದ ಪ್ರಕಾರ ಜಪಾನ್ ತನ್ನ ಮಿಲಿಟರಿ ಮತ್ತು ಆರ್ಥಿಕ ಹಿಡಿತವನ್ನು ಕೊರಿಯಾ, ಚೀನಾ, ಇಂಡೋಚೀನಾ, ಥೈಲೆಂಡ್, ಮಲಯ, ಇಂಡೋನೇಶಿಯಾ, ಬರ್ಮಾ, ಓಸಿಯಾನಾ, ಭಾರತದ ಪೂರ್ವಭಾಗ ಮತ್ತು ಇತರ ಪ್ರದೇಶಗಳ ಮೇಲೆ ಸ್ಥಾಪಿಸುವುದಾಗಿತ್ತು. ಈ ಒಪ್ಪಂದಕ್ಕನುಸರಿಸಿ, ಗುರಿಯನ್ನು ಸಾಧಿಸಲು ಒಳಸಂಚು ಮತ್ತು ಆಕ್ರಮಣದ ನಿರ್ಧಿಷ್ಟ ಸಿದ್ಧತೆ ಮಾಡಬೇಕೆಂದು ಜಪಾನಿನೊಡನೆ ಗುಪ್ತ ವಿಚಾರ ವಿನಿಮಯ ನಡೆಸಲಾಗಿತ್ತು.

ಆಫ್ರಿಕವನ್ನು ವಶಪಡಿಸಿಕೊಂಡು ಅಮೇರಿಕದ ಮೇಲೆ ಆಕ್ರಮಣ ನಡೆಸುವ ಹೊಂಚನ್ನೂ ನಾಝಿಗಳು ತಯಾರಿಸಿದ್ದರು. ಆದರೆ ಇಡೀ ಜಗತ್ತಿನ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸುವ ಈ ಹೊಂಚನ್ನು ಸೋವಿಯತ್ ಯೂನಿಯನ್ ನಾಶ ಮಾಡಿತು ಸೋವಿಯತ್ ವಿಜಯದಿಂದಾಗಿಯೇ ಕಳೆದ ನಾಲ್ವತ್ತಕ್ಕೂ ಹೆಚ್ಚು ವರ್ಷ ಕಾಲದಿಂದ ರಾಷ್ಟ್ರಗಳು ಶಾಂತಿಯಿಂದ ಜೀವನ ನಡೆಸಲು ಸಾಧ್ಯವಾಗಿದೆ.

ಎರಡನೇ ಮಹಾಯುದ್ಧ ಕೊನೆಗೊಂಡಾಕ್ಷಣ ಪಾಶ್ಚಾತ್ಯ ದೇಶಗಳು ಶೀತಲ ಯುದ್ಧ ಪ್ರಾರಂಭಿಸಿದವು.

ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸ್ಟರನ್ನು ಸೋಲಿಸುವಲ್ಲಿ ಸೋವಿಯತ್ ಸರಕಾರದ ಪಾತ್ರ, ಸೋವಿಯತ್ ಸೈನಿಕರ ಮಿಲಿಟರಿ ಕ್ರಮಗಳ ಕುರಿತು ಅಮೇರಿಕ, ಇಂಗ್ಲೆಂಡ್ ಮತ್ತಿನ್ನಿತರ ಬಂಡವಾಳ ಶಾಹಿ ದೇಶಗಳು ಅಪಪ್ರಚಾರ ನಡೆಸಿ, ರಶ್ಯಾ ದೇಶದ ವಿದೇಶ ಧೋರಣೆಯನ್ನು ವಿರೂಪಗೊಳಿಸಲಿಕ್ಕೆ ಶತ ಪ್ರಯತ್ನ ನಡೆಸಿದರು. ಎರಡನೇ ಮಹಾಯುದ್ಧದ ಚರಿತ್ರೆಯನ್ನೇ ಸುಳ್ಳಾಗಿಸಲು ಇನ್ನೂ ಪ್ರಯತ್ನ ನಡೆಸಿದ್ದಾರೆ, ಆದರೆ ಎರಡನೇ ಮಹಾಯುದ್ಧದಲ್ಲಿ ಸೋವಿಯತ್ ಯೂನಿಯನಿನ ನಿರ್ಣಾಯಕ ಪಾತ್ರ ಅದರ ಸೈನಿಕರ ಪೌರುಷ, ಚಾಣಾಕ್ಷತನ, ಸಹಿಷ್ಣುತೆಗಳ ಕುರಿತು ಪಾಶ್ಚಾತ್ಯ ದೇಶಗಳಲ್ಲಿ ಹಲವಾರು ಭಾಷಣಗಳನ್ನು ಕೇಳುವ ಕಾಲವೂ ಒಂದಿತ್ತು.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಸಾಧಿಸಿದ ಪರಿಣಾಮಗಳನ್ನು ಬದಲಿಸಲು ಜಗತ್ತಿನ ಪ್ರತಿಗಾಮಿಶಕ್ತಿಗಳು ಪ್ರಯತ್ನಿಸುತ್ತಿವೆ. ಜನರ ಮನಸ್ಸಿನಲ್ಲಿ ದ್ವೇಷ ಅಸೂಯೆಗಳನ್ನುಂಟು ಮಾಡಲು ವೈರತ್ವ ಬೆಳೆಸಲು ಸಂಕುಚಿತ ಭಾವನೆಗಳನ್ನು ಕೆರಳಿಸಲು ಹಾಗೆಯೇ ಹಿಂಸಾಚಾರ.ಆಕ್ರಮಣಗಳ ಮೂಲಕ ಸೋವಿಯತ್ ಯೂನಿಯನಿನ ಮೇಲೆ ಮಿಲಿಟರಿ ಪ್ರಭುತ್ವ ಸ್ಥಾಪಿಸಲು ಅವು ಶತ ಪ್ರಯತ್ನ ನಡೆಸಿವೆ.

ಹಿಟ್ಲರನ ವಿರೋಧವಾಗಿ ಹೋರಾಡಿದ ನಾಲ್ಕು ವರ್ಷಗಳಲ್ಲಿ ಎರಡು ಮಹಾರಾಷ್ಟ್ರಗಳಾದ ರಶ್ಯಾ ಮತ್ತು ಅಮೇರಿಕ ದೇಶಗಳ ಮಧ್ಯೆ ಹಲವಾರು ಒಂದಕ್ಕೊಂದುಸಮಾನಾಂತರದಒಪ್ಪಿಗೆ ವಿಷಯಗಳಿವೆ, ಫಲದಾಯಕವಾದ ಶಾಂತಿ ನೆಲೆಸುವುದರಲ್ಲಿ ಅವ್ಯಾವುದು ಕೂಡ ವಿರೋಧಾಭಾಸ ಉಂಟು ಮಾಡುವುದಿಲ್ಲೆಂಬುದನ್ನು ಸ್ಪಷ್ಟಪಡಿಸಿವೆ. ಆದರೆ ಈಗ ಸಾಮ್ರಾಜ್ಯಶಾಹಿಗಳ ತಪ್ಪಿನಿಂದಾಗಿ ಅಂತ್ರರಾಷ್ಟ್ರೀಯ ಸಂಬಂಧಗಳು ಗಂಡಾಂತರಕಾರಿ ಮಟ್ಟವನ್ನು ತಲ್ಪಿವೆ. ಅಂಥ ಗಂಭೀರ ಪರಿಸ್ಥಿತಿಯನ್ನು ತಪ್ಪಿಸಬೇಕಾದರೆ ಅಣುಯುದ್ಧದಿಂದ ಹಿಂದೆ ಸರಿಯುವ ನಿರ್ಣಯ ಕೈಗೊಳ್ಳುವುದು ಅತ್ಯಗತ್ಯ.

1985 ನವಂಬರ್ 19-21 ರಂದು ಜಿನೇವಾದಲ್ಲಿ ರೇಗನ್-ಗೋರ್ಬಚೇವ ಅವರ ಶೃಂಗ ಸಭೆ ನಡೆದಾಗ ಯುದ್ಧದ ಭೀತಿಯನ್ನು ತಪ್ಪಿಸಿ, ಒಳ್ಳೆ ಸಂಬಂಧ ಬೆಳೆಸುವ ಉದ್ದೇಶದಿಂದ ಸೋವಿಯತ್ ಪ್ರತಿನಿಧಿಗಳು ಹಲವಾರು ಸೂಚನೆಗಳನ್ನು ಮುಂದೆ ಮಾಡಿದ್ದರು ಅಮೇರಿಕ ಅವುಗಳಿಗೆ ಒಪ್ಪದ್ದರಿಂದ ಯಶಸ್ಸು ಸಿಗಲಿಲ್ಲ.

ಸಮತಾವಾದವೆಂದರೆ ಶಾಂತಿ. ಅದು ಬೇರೆ ಯಾವ ಧೋರಣೆಯನ್ನನುಸರಿಸಲೂ ಸಾಧ್ಯವಿಲ್ಲ. ಅಂತರ್ರಾಷ್ಟ್ರೀಯ ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಪ್ಪಿಸಲು ಲೆನಿನ್ನರ ಪಕ್ಷವಾದ ಸೋವಿಯತ್ ಕಮ್ಯುನಿಸ್ಟ ಪಕ್ಷದ ಆದೇಶದಂತೆ ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಸೋವಿಯತ್ ದೇಶದ ಜನತೆಯ ಶಾಂತಿಮಯ ಶ್ರಮದ ಫಲಗಳನ್ನುಳಿಸಲು, ಜಗತ್ತಿನಲ್ಲಿ ಶಾಂತಿ ಕಾಪಾಡಲು ದುಡಿಯುತ್ತಿದ್ದಾರೆ.

ಅಷ್ಟೆಲ್ಲಾದರೂ ಕೂಡ ಸಮತಾವಾದಿ ಸಮಾಜವನ್ನು ನಾಶಮಾಡಿಯೆ ತೀರುತ್ತೇನೆ. ಜಗತ್ತಿನ ಶಾಂತಿ ಕದಡುತ್ತೇವೆಂದು ಯಾರಾದರೂ ಯುದ್ಧ ಪ್ರಾರಂಭಿಸಿದರೆ ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್ ಹಾಗೆಯೇ ಅಜೇಯವೆಂದು ತಿಳಿದಿದ್ದ ನಾಝಿ ಸೈನಿಕರ ಗತಿ ಅವರದಾಗುತ್ತದೆಂದು ಆ ಶಕ್ತಿಗಳು ಮನವರಿಕೆ ಮಾಡಿಕೊಳ್ಳುವುದು ಅಗತ್ಯ.

ಸಮತಾವಾದ ಅಜೇಯ ಸಮತಾವಾದಿ ಜನತೆ ಅಜೇಯ.

ಬೆಂಗಳೂರಿನಲ್ಲಿ ದ. ಆಫ್ರಿಕಾದ ಭೋಥಾ ಸರಕಾರದ ವಿರುದ್ಧ ಮೆರವಣಿಗೆ

"ಫ್ಯಾಸಿಸ್ಟ್ ಭೋಥಾ ಸರಕಾರಕ್ಕೆ ಧಿಕ್ಕಾರ" "ಬೋಥಾ ಸರಕಾರದ ವರ್ಣಬೇಧ ನೀತಿಗೆ ಧಿಕ್ಕಾರ" "ಕರಿಜನರ ಮೇಲಿನ ದಬ್ಬಾಳಿಕೆ ಕೊನೆಗೊಳ್ಳಲಿ" "ದ. ಆಫ್ರಿಕದ ಜನರ ಹೋರಾಟಕ್ಕೆ ಜಯವಾಗಲಿ" "ಸಿ.ಐ.ಟಿ.ಯು ಜಿಂದಾಬಾದ್" ಎಂಬ ಘೋಷಣೆಯೊಂದಿಗೆ ವರ್ಣದ್ವೇಷ ವಿರೋಧಿ ದಿನಾಚರಣೆಯನ್ನು ಬೆಂಗಳೂರು ಜಿಲ್ಲಾ ಸಿ.ಐ.ಟಿಯು ಜೂನ್ 16 ರಂದು ಪ್ರಭಾವಯುತವಾಗಿ ಆಚರಿಸಿತು. ಚಿಕ್ಕಲಾಲ್ ಬಾಗಿನಿಂದ ಕಾರ್ಮಿಕರ, ವಿದ್ಯಾರ್ಥಿಗಳ ಮೆರವಣಿಗೆ ಘೋಷಣೆಕೂಗುತ್ತ ಫ್ಯಾಸಿಸ್ಟ್ ಭೋಥಾನ ಕಾಗದದ ಪ್ರತಿಮೆಯನ್ನು ಪ್ರದರ್ಶಿಸುತ್ತಾ ಮುಖ್ಯ ಮಾರ್ಕೇಟ್ ಪ್ರದೇಶದಲ್ಲಿ ಸುತ್ತಾಡಿ ಮೈಸೂರು ಬ್ಯಾಂಕ್ ಸರ್ಕಲ್ಲಿನಲ್ಲಿ ಉತ್ಸಾಹದ ಮಧ್ಯೆ ಪ್ರತಿಮೆಯನ್ನು ಸುಟ್ಟುಹಾಕಿದರು. ನಂತರ ನಡೆದ ಸಭೆಯಲ್ಲಿ ಸಿ.ಐ.ಟಿ.ಯು ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್, ಡಿಮೋಕ್ರೇಟಿಕ್ ಲಾಯರ್ಸ್ ಅಸೋಸಿಯೇಶನಿನ ಗೋಪಾಲಗೌಡ, ವಿದ್ಯಾರ್ಥಿ ಮುಖಂಡ ಎಸ್. ಆರ್. ಆರಾಧ್ಯ, ಆರ್. ಶ್ರೀನಿವಾಸ, ನಾರಾಯಣರಾವ್ ಬಾನು ಮೊದಲಾದವರು ಭಾಷಣ ಮಾಡಿ, ದ. ಆಫ್ರಿಕದಲ್ಲಿಯ ದಬ್ಬಾಳಿಕೆಯನ್ನು ಖಂಡಿಸಿ, ಕರಿಯಜನರ ಹೋರಾಟಕ್ಕೆ ಬೆಂಬಲ ನೀಡಿದರು.

ಪುತ್ತೂರು : ದರಖಾಸ್ತು ಭೂಮಿಯನ್ನು ಕಾಯಂಗೊಳಿಸಿರಿ

ದರಖಾಸ್ತು ಭೂಮಿಯನ್ನು ಭೂಹೀನ ಬಡರೈತರಿಗೆ ಹಂಚಬೇಕೆಂದು ರೈತ ಸಂಘ ಹೋರಾಡುತ್ತಾ ಬಂದಿದ್ದರೂ, ಜನತಾ ಸರಕಾರ ತಾನಿತ್ತ ಆಶ್ವಾಸನೆಯನ್ನು ಪೂರೈಸುತ್ತಿಲ್ಲ. ಕಾರಣ ದರಖಾಸ್ತು ಭೂಮಿಗಾಗಿ ತೀವ್ರ ಹೋರಾಟ ನಡೆಸಬೇಕೆಂದು ಇತ್ತೀಚೆಗೆ ಪುತ್ತೂರಿನಲ್ಲಿ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ತೀರ್ಮಾನಿಸಲಾಯಿತು.

ತಾಲೂಕು ರೈತ ಸಂಘದ ಕಾರ್ಯದರ್ಶಿಯವರಾದ ಅಣ್ಣು ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರೈತಕಾರ್ಮಿಕರ ಮುಂಖಂಡರಾದ ಬಿ ರಾಮಕೃಷ್ಣ ಅವರು ಮಾತಾಡುತ್ತ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 40 ವರ್ಷಗಳಾದರೂ ಗ್ರಾಮೀಣ ಜನತೆಯ ಬಡತನ, ಅಜ್ಞಾನ, ಇನ್ನೂ ನಿವಾರಣೆಯಾಗಿಲ್ಲೆಂದೂ, ಭೀಕರ ಬರಗಾಲ ಬಡ ಜನರನ್ನು ಕಾಡುತ್ತಿದೆಂದೂ, ಗ್ರಾಮಾಂತರ ಪ್ರದೇಶದ ಜನ ಪಟ್ಟಣ ಸೇರಿ ಕಡಿಮೆ ಕೂಲಿಗೆ ತಮ್ಮಶ್ರಮ ಮಾರಾಟಮಾಡಿಕೊಂಡು ಬಂಡವಾಳದಾರರ ಸುಲಿಗೆಗೆ ಬಲಿಯಾಗುತ್ತಾರಷ್ಟೇ ಅಲ್ಲದೆ ಸಂಘಟಿತ ಕಾರ್ಮಿಕರ ಹೋರಾಟಕ್ಕೆ ಅಡ್ಡಿಯಾಗುತ್ತಿದ್ದಾರೆಂದು ಹೇಳಿ ಅಸಂಘಟಿತ ಕಾರ್ಮಿಕರನ್ನು ಸಂಘಟಿಸವುದರ ಅಗತ್ಯವನ್ನು ಒತ್ತಿ ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬಲಿಷ್ಟವಾದ ರೈತ ಸಂಘಕಟ್ಟಿ ಹೋರಾಡಬೇಕೆಂದು ಕರೆನೀಡಿದರು. ಪ್ರಾರಂಭದಲ್ಲಿ ಯುವಕ ಮುಂದಾಳು ಜೋಕಿಮ್ ಅವರು ಸ್ವಾಗತಿಸಿದರು. ಕೊನೆಯಲ್ಲಿ ಪದ್ಮನಾಭರವರು ಅಭಾರ ಮನ್ನಿಸಿದರು.

ಗುಲಬುರ್ಗಾ : ಸರಕಾರದ ಒಣ ಆಶ್ವಾಸನೆಗಳು

ಕರ್ನಾಟಕ ಪ್ರಾಂತ ರೈತ ಸಂಘವು ರೈತಾಪಿ, ವಿದ್ಯಾರ್ಥಿ, ಮಹಿಳೆಯರ ಸಮಸ್ಯೆ ಈಡೇರಿಕೆಯ ಸಲುವಾಗಿ ಸತತವಾಗಿ ಹೋರಾಡುತ್ತಾ ಸಾಗಿದೆ.

ಸುಮಾರು 8೦ ವರ್ಷಗಳಾದರೂ ಈ ಪ್ರದೇಶಕ್ಕೆ ಶಾಶ್ವತ ಪರಿಹಾರವಿಲ್ಲದ ಕಾರಣ ಭೀಕರ ಬರಗಾಲದಿಂದ ಬಳಲುವಂತಾಗಿದೆ. ಆದ್ದರಿಂದ ಗುಲಬುರ್ಗಾ ರೈತ ಸಂಘವು ಕಾಮಗಾರಿಗೆ ಉಚಿತಮೇವು, ಪುಕ್ಕಟೆಯಾಗಿ ರೈತರಿಗೆಬೀಜ, ಗೊಬ್ಬರ ತಾಲೂಕಿನಾದ್ಯಂತ ಕೊಡಬೇಕೆಂದು ಹಾಗೂ ಗುಲಬುರ್ಗಾ ನಗರಕ್ಕೆ ಪದವಿ ಕಾಲೇಜನ್ನು ನೀಡಬೇಕೆಂದು ಕೇಳಿದ್ದು ದಿನಾಂಕ 27-12-85 ರಂದು ಮುಖ್ಯ ಮಂತ್ರಿ ಗುಲಬುರ್ಗಕ್ಕೆ ಪದವಿ ಕಾಲೇಜ್ ಕೊಡುವವಾಗಿ ಆಶ್ವಾಸನೆ ನೀಡಿ ಹೋದರು. ಈ ಪ್ರಕಾರವಾಗಿ ನಗರ ಶಿಕ್ಷಣ ಸಮಿತಿಯವರು ಕಾಗದ ಪತ್ರವನ್ನು ಸರಕಾರಕ್ಕೆ ಸಕಾಲದಲ್ಲಿ ನೀಡಿದರು. ವಿದ್ಯಾರ್ಥಿ ಸಂಘದ ವಿಷಯವಾಗಿ ಮನವಿಯನ್ನು ಸರಕಾರಕ್ಕೆ ತಿಳಿಸುತ್ತಾ ಬಂದರು ಇದಾವುದಕ್ಕೂ ಕಣ್ಣು ತೆಗೆಯದ್ದನ್ನು ಕಂಡು ರೈತ ಸಂಘವು ಗುಲಬುರ್ಗಾ ಬಂದ್ ಹಾಗೂ ರಸ್ತೆ ತಡೆಯ ಕಾರ್ಯಕ್ರಮ ಹಾಕಿಕೊಂಡಿತು.

ಇಂದಿನ ಸರಕಾರ ಹಾಗೂ ಪೋಲೀಸರು ದೌರ್ಜನ್ಯ ನಡೆಸಿದ್ದಾರೆ. ಇದರಿಂದ ಗುಲಬುರ್ಗಾ ತಾಲೂಕಿನಲ್ಲಿ ಸುಮಾರು 60 ಜನ ರೈತರು ಗಾಯಗೊಂಡಿದ್ದು 85 ಜನರನ್ನು ಜೇಲಿಗೆ ಹಾಕಿದ್ದಾರೆ. ಈ ಪೋಲೀಸರ ಕೃತಿಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಖಂಡಿಸುವುದಲ್ಲದೇ ಬಂದಿತರನ್ನು ಬಿಡುಗಡೆ ಮಾಡದಿದ್ದಲ್ಲಿ ಮುಂದಿನ ಕ್ರಮ ಕೈಕೊಳ್ಳಬೇಕಾಗುತ್ತದೆಂದು ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ನಾನು ಮತ್ತು....

(4ನೆಯ ಪುಟದಿಂದ)

ದೇಶದ್ರೋಹಿಗಳು" ಎಂದು ಅಪಪ್ರಚಾರ ಮಾಡಿದಾಗ "ನೀವೆಂಥ ದೇಶಪ್ರೇಮಿಗಳು. ಹಿಟ್ಲರ್ ಬಂದರೆ ನೀವು ಕತ್ತಲೆ ಕೋಣೆಯಲ್ಲಿ ನರಳಬೇಕಾದೀತು, ನಾಝಿಗಳ ಬೂಟುಕಾಲಿನಿಂದ ತುಳಿಸಿಕೊಳ್ಳಲ್ಪಡಬೇಕಾದೀತು, ಗುಂಡಿಗೆ ಬಲಿಯಾಗಬೇಕಾದೀತು. ಆಗ ನಿಮ್ಮ ಚಳುವಳಿಯ ರುಚಿ ನಿಮಗೆ ತಿಳಿಯುತ್ತಿತ್ತು" ಎಂಬ ಉತ್ತರ ಬರುತ್ತಿತ್ತು.

"ಜನತಾ ಯುದ್ಧ" ಅರ್ಥ ತಿಳಿದುಕೊಳ್ಳುವ ಜನರೂ ಇದ್ದರು. ಆ ಕಾರಣದಿಂದಲೇ ಆವಾಗ ಅತಿ ಹೆಚ್ಚಿನ ಸಾಹಿತ್ಯ ಮಾರಾಟ ಮಾಡಲುನಮಗೆ ಸಾಧ್ಯವಾಗುತ್ತಿತ್ತು. ಕೆಲವರಿಂದ "ದೇಶದ್ರೋಹಿಗಳು"ಎಂದೆನಿಸಿಕೊಂಡು ಜನರ ಮಧ್ಯೆ ಹೆಮ್ಮೆಯಿಂದ ಧೈರ್ಯದಿಂದ ಕೆಲಸ ಮಾಡಲು ಸಾಧ್ಯವಾಗುತ್ತಿತ್ತು. ಸ್ಫೂರ್ತಿ ದೊರೆಯುತ್ತಿತ್ತು.

ಕುಷ್ಟಗಿ : ಪೋಲೀಸ್ ದಬ್ಬಾಳಿಕೆಯ ಖಂಡನೆ

12-5-86 ರಂದು ಕುಷ್ಟಗಿಯಲ್ಲಿ ಅಲ್ಲಿಯ ಶಾಸಕ ಬಸವರಾಜ ರಾಯರೆಡ್ಡಿ ಅವರ ಕುಮ್ಮಕ್ಕಿನಿಂದ ನಡೆದ ಲಾಠಿಚಾರ್ಜನ್ನು ಮತ್ತು ಮಾನ್ವಿಯ ಅಲನಹಳ್ಳಿಯ ರೈತರನ್ನು ಸೇರಿ ಎಲ್ಲಾ ಕಡೆ ನಡೆದ ಬಂಧನವನ್ನು ಖಂಡಿಸಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಸಮಿತಿ ನೇತೃತ್ವದಲ್ಲಿ ಪೋಲೀಸ್ ಲಾಠಿಚಾರ್ಜಿಗೆ ಧಿಕ್ಕಾರ, ಜನತಾ ಸರಕಾರದ ಪೋಲೀಸ್‌ನೀತಿಗೆ ಧಿಕ್ಕಾರ, ರೈತರ ಮೇಲೆ ಹಾಕಿದ ಕೇಸನ್ನು ವಾಪಾಸು ತೆಗೆದುಕೊಳ್ಳಿ ಎಂಬ ಘೋಷಣೆಯೊಂದಿಗೆ ರೈತ ಕೃಷಿ ಕಾರ್ಮಿಕರು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮುಖಾಂತರ ತಾಲೂಕಾ ಕಚೇರಿಗೆ ಬಂದು ತಹಶೀಲ್ದಾರರಿಗೆ ಮನವಿ ಪತ್ರವನ್ನು ಅರ್ಪಿಸಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಧರಣಿಗೆ ಕುಳಿತ ಜನರನ್ನು ಉದ್ದೇಶಿಸಿ ಬಾಷುಮಿಯಾ, ಶೇಖಖಾದ್ರಿ, ಸಿದ್ದನಗೌಡ ಮಾತನಾಡಿ ಪೋಲೀಸ್ ಲಾಠಿಚಾರ್ಜನ್ನು ಬಲವಾಗಿ ಖಂಡಿಸಿದರು ರೈತ ಸಂಘಟನೆಯ ಕಾಂ. ಬಸವರಾಜಪ್ಪ ಮಾಲೀಪಾಟೀಲ, ನಾಯ್ಕ ಲಿಂಗಪ್ಪ, ಕಂಟೆಪ್ಪ ಮೊದಲಾದವರೆಲ್ಲ ಮಾತಾಡಿದರು.

ದಾಂಡೇಲಿಯಲ್ಲಿ

ಮೇ ಶತಮಾನೋತ್ಸವ

(ಈ ವರ್ಷ ಮೇ ದಿನದ ಶತಮಾನೋತ್ಸವದ ಅಂಗವಾಗಿ ದಾಂಡೇಲಿ-ಹರಿಹರಗಳಲ್ಲಿ ಆಟ, ವಿಚಾರ ಸಂಕಿರಣ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ವಿನೂತನ ರೀತಿಯಲ್ಲಿ ಎಲ್ಲ ಕಾರ್ಮಿಕರು, ಸಾರ್ವಜನಿಕರೂ ಅದರಲ್ಲಿ ಭಾಗವಹಿಸುವಂತೆ ಮಾಡಿರುವುದು ಸ್ವಾಗತಾರ್ಹ. ಔಪಚಾರಿಕವಾಗಿ ಮೇ ದಿನಾಚರಣೆ ಆಚರಿಸುವುದರಿಂದ ಕ್ರಾಂತಿಕಾರಿ ಪರಂಪರೆಯನ್ನು ಉಳಿಸಿಕೊಂಡಂತಾಗುವುದಿಲ್ಲ. ರಾಜ್ಯದ ಇತರ ಕಾರ್ಮಿಕ ಕೇಂದ್ರಗಳಲ್ಲಿ ಕೂಡ ಇನ್ನು ಮುಂದೆ ಹರಿಹರ-ದಾಂಡೇಲಿಗಳ ಕಾರ್ಯಕ್ರಮಗಳಿಂದ ಸ್ಫೂರ್ತಿಗೊಂಡು ಹೊಸ ರೀತಿಯಲ್ಲಿ ಮೇ ದಿನಾಚರಣೆ ಆಚರಿಸುತ್ತಾರೆಂದು ಆಶಿಸುತ್ತೇವೆ.)

ಮೇ ಶತಮಾನೋತ್ಸವದ ಅಂಗವಾಗಿ ದಾಂಡೇಲಿಯ ಪ್ಲೈವುಡ್ ಕಾರ್ಮಿಕರು ನಾನಾತರದ ಆಟದ ಸ್ಪರ್ಧೆಏರ್ಪಡಿಸಿ ವಿಜೇತರಿಗೆ ಬಹುಮಾನ ಹಂಚುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಕ್ರಿಕೆಟ್ ಆಟದ ಉದ್ಘಾಟನೆಯನ್ನು ಸಿ. ಐ. ಟಿ. ಯು ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್, ವಾಲಿಬಾಲ್ ಆಟದ ಉದ್ಘಾಟನೆಯನ್ನು ಪ್ಲೈವುಡ್ ಕಂಪನಿಯ ಜ. ಮ್ಯಾನೇಜರ್ ಕಿಶೋರ ಸಪಟೆ, ಫುಟ್‌ಬಾಲ್ ಆಟವನ್ನು ವ್ಯಾಪಾರಿಗಳಾದ ವಿಷ್ಣು ಕಾಮತ ಉದ್ಘಾಟಿಸಿದರು. ಕ್ರಿಕೇಟ್‌ನಲ್ಲಿ 13, ವಾಲಿಬಾಲ್‌ನಲ್ಲಿ 5, ಫುಟ್‌ಬಾಲ್‌ನಲ್ಲಿ 6 ಟೀಮುಗಳು ಪಾಲ್ಗೊಂಡಿದ್ದವು 12 ದಿವಸ ಕಾರ್ಯಕ್ರಮದ ಕೊನೆಯಲ್ಲಿ ಆಟಗಳಲ್ಲಿ ವಿಜೇತರಿಗೆಲ್ಲ ಬಹುಮಾನ ವಿತರಣೆ ಮಾಡಲಾಯಿತು. ಹಳೇ ದಾಂಡೇಲಿಯನ್ನೆಲ್ಲ ಕೆಂಪು ದೀಪಗಳಿಂದ ಅಲಂಕರಿಸಲಾಗಿತ್ತು. ಆ ಸಮಾರಂಭದ ಅಧ್ಯಕ್ಷತೆಯನ್ನು ನಗರಸಭಾಧ್ಯಕ್ಷರಾದ ಟಿ. ಎಸ್. ನಾಯಕ ವಹಿಸಿದ್ದರು. ಪೋಲೀಸ್‌ಇನ್‌ಸ್ಪೆಕ್ಟರ್ ಆರ್. ಆರ್. ಪಾಟೀಲರು ಬಹುಮಾನ ವಿತರಣೆ ಮಾಡಿ ಕಾರ್ಮಿಕರೆಲ್ಲ ಇಂಥ ಕಾರ್ಯಕ್ರಮಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಹೇಳಿದರು, ಮಾಲಾರ್ಪಣೆಯನ್ನು ಎಸ್. ಪುಲ್ಲಯ್ಯ, ವಂದನಾರ್ಪಣೆಯನ್ನು ಅಕ್ರಂಖಾನ್ ಮಾಡಿದರು.

ದಾಂಡೇಲಿಯಲ್ಲಿ ನೀರಿಗಾಗಿ ಧರಣಿ

ದಾಂಡೇಲಿಯಿಂದ 3 ಕಿ. ಮಿ. ದೂರದಲ್ಲಿರುವ ಜನತಾ ಕಾಲೊನಿನಿವಾಸಿಗಳಿಗೆ ನೀರಿನ ಸರಬರಾಜು ವ್ಯವಸ್ಥೆ ಸರಿಯಾಗಿಲ್ಲ, ಹಸಿರು ಕಾರ್ಡು ಕೊಟ್ಟಿಲ್ಲ. ಈ ಪ್ರದೇಶವಲ್ಲಿ ಇನ್ನೂ ಹೆಚ್ಚು ಜನತಾ ಮನೆಗಳನ್ನು ಕಟ್ಟಲಾಗುವುದೆಂಬ ಆಶ್ವಾಸನೆ ಬರೇ ಕಾಗದದಲ್ಲೇ ಉಳಿದಿದೆ ಇವುಗಳ ಕುರಿತು ಸಾಕಷ್ಟು ಅರ್ಜಿ ಸಲ್ಲಿಸಿದ್ದರೂ ಏನು ಪರಿಣಾಮವಾಗಿಲ್ಲ ಆದ ಕಾರಣ ದಾಂಡೇಲಿಯ ಸಿ. ಪಿ. ಐ. (ಎಂ) ಕಾರ್ಯಕರ್ತರು ಜೋಡಾ೯ ತಹಶೀಲ್ದಾರ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಬೇಕಾಯಿತು.

ಕಾರ್ಯಕರ್ತರು ಮೆರವಣಿಗೆಯಲ್ಲಿ ಹೋಗಿ ಕಚೇರಿ ಮುಂದೆ ಧರಣಿ ನಡೆಸಿದಾಗ, ತಹಶೀಲ್ದಾರರು ಸಿ. ಪಿ. ಐ. (ಎಂ) ಕಾರ್ಯದರ್ಶಿ ಅಕ್ರಮ್‌ಖಾನ್ ಹಾಗೂ ನಗರಸಭಾ ಸದಸ್ಯ ಹರೀಶ ನಾಯ್ಕ ಅವರ ಜೊತೆಯಲ್ಲಿ ಚರ್ಚೆ ಮಾಡಿ, ಸಮಸ್ಯೆಗಳ ಪರಿಹಾರಕ್ಕೆ ತೀವ್ರ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು. ನಂತರ ಕಾರ್ಯಕರ್ತರು ಮೆರವಣಿಗೆಯಲ್ಲಿ ಜೋಡಾ೯ ನಗರಕ್ಕೆ ಹೋಗಿ ಸಾರ್ವಜನಿಕ ಸಭೆ ನಡೆಸಿದರು.

ಕೃಷಿ ಕಾರ್ಮಿಕರಿಗೆ ಕೇಂದ್ರ ಮಸೂದೆ ಅಗತ್ಯ

(3ನೆಯ ಪುಟದಿಂದ)

ಒಪ್ಪಿಗೆ ನೀಡಿರುವುದರಿಂದ, ಅದನ್ನು ಅಸ್ತ್ರವಾಗಿಟ್ಟುಕೊಂಡು ಹೋರಾಟ ಮುಂದುವರಿಸಬೇಕೆಂದು ಹರಿಕಿಶನ್ ಸಿಂಗ್ ಸೂರ್ಜಿತ್ ಕರೆಕೊಟ್ಟರು.

ಮುಂದಿನ ಸಮಾವೇಶ

ಅ. ಭಾ. ಕೃ. ಕಾರ್ಮಿಕ ಯೂನಿಯನಿನ ಎರಡನೇ ಸಮ್ಮೇಳನವನ್ನು ಕೇರಳದ ಪಾಲ್ಘಾಟನಲ್ಲಿ ಅಕ್ಟೋಬರ 28, 29,30 ರಂದು ನಡೆಸಬೇಕೆಂದು ತೀರ್ಮಾನಿಸಲಾಯಿತು. 2500 ಸದಸ್ಯರಿಗೆ ಒಬ್ಬ ಪ್ರತಿಯನ್ನು ಆರಿಸಬೇಕೆಂದೂ, ಪ್ರತಿರಾಜ್ಯಕ್ಕೆ ಕನಿಷ್ಟ 5 ಪ್ರತಿನಿಧಿಗಳನ್ನು ಆರಿಸಬಹುದೆಂದು ನಿರ್ಣಯಿಸಲಾಯಿತು. ಒಟ್ಟು 500 ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಳ್ಳುವರು. ಕೃಷಿ ಕಾರ್ಮಿಕರ ಹಿತದ ಸಲುವಾಗಿ ಜೀವತೆತ್ತ ಕಿಲ್‌ವನ್‌ಮಣಿಯ ಹುತಾತ್ಮರ ನೆನಪಿಗಾಗಿ ತಮಿಳು ನಾಡಿನ ಕೃಷಿ ಕಾರ್ಮಿಕರ ಸಂಘ ಕಿಲವನ್‌ಮಣಿಯಿಂದ ಕೆಂಬಾಟದ ಜಾಥಾ ಹೊರಡಿಸಿ ರಾಜ್ಯಾದ್ಯಂತ ಪಾದಯಾತ್ರೆ ನಡೆಸಿ ಅಕ್ಟೋಬರ್ 28 ರಂದು ಪಾಲ್ಘಾಟ್ ಸೇರುವದು. ಎರಡನೇ ಸಮ್ಮೇಳನದಲ್ಲಿ ಆ ಧ್ವಜವನ್ನೇರಿಸಲಾಗುವುದು.

ಹರಿಹರದಲ್ಲಿ ಮೇ ದಿನದ ಶತಮಾನೋತ್ಸವ ಮತ್ತು ಸಿ. ಐ. ಟಿ. ಯು. ಸ್ಥಾಪನಾ ದಿನಾಚರಣೆ

ಹರಿಹರದ ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘ, ಹರಿಹರ ಪಾಲಿಫೈಬರ್ಸ್ ಕನ್‌ಸ್ಟ್ರಕ್ಷನ್ ವರ್ಕರ್ಸ್ ಯುನಿಯನ್, ಗ್ವಾಲಿಯರ್ ರೇಯಾನ್ಸ್ ಗ್ರಾಸಲೀನ್ ಡಿವಿಜನ್ ಎಂಪ್ಲಾಯಿಸ್ ಅಸೋಸಿಯೇಶನ್, ದೊಡ್ಡಬಾತಿ ಬಧ್ರಾ ಸಕ್ಕರೆ ಕಾರ್ಖಾನೆ ಕೆಲಸಗಾರರ ಸಂಘ, ಹರಿಹರ ತಾಲ್ಲೂಕು ಬೀಡಿ ಕೆಲಸಗಾರರ ಸಂಘ ಕುಮಾರ ಪಟ್ಟಣಂ ಸಂಗಂ ಸಾಲ್ವೆಂಟ್ ಕೆಲಸಗಾರರ ಸಂಘಗಳ ಕಾರ್ಮಿಕರು ಹರಿಹರ ಸಿ. ಐ. ಟಿ. ಯು. ಸಮನ್ವಯ ಸಮಿತಿಯ ಅಡಿಯಲ್ಲಿ ಮೇ ದಿನದ ಶತಮಾನೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು.

ಸಿ. ಐ. ಟಿ. ಯು. ಬಾವುಟಗಳ ಆರೋಹಣ

ಹರಿಹರ ನಗರದಲ್ಲಿ ಮಾತ್ರವಲ್ಲದೆ ಹೊಸಪೇಟೆ, ನಲವಾಗಲ್, ಅಮರಾವತಿ, ಕರೂರು, ದೊಡ್ಡಬಾತಿ, ಕವಲತ್ತು ಮೊದಲಾದ ಸಮೀಪದ ಹಳ್ಳಿಗಳಲ್ಲೂ ಒಟ್ಟು ಒಂದು ಸಾವಿರ ಕಾರ್ಮಿಕರ ಮನೆಗಳ ಮೇಲೆ ಸಿ. ಐ. ಟಿ. ಯು. ಬಾವುಟಗಳನ್ನು ಹಾರಿಸಲಾಯಿತು.

ಮೈಸೂರ್ ಕಿರ್ಲೋಸ್ಕರ್ ಕೆಲಸಗಾರರ ಸಂಘದ ಕಚೇರಿ ಆವರಣದಲ್ಲಿ ವಿ. ಜೆ. ಕೆ. ನಾಯರ್ ಧ್ವಜಾರೋಹಣ ಮಾಡಿದರು. ಕೆಂಬಾವುಟ ಆರೋಹಣಗೊಳ್ಳುತ್ತಿದ್ದಂತೆ ವಿಶ್ವಶಾಂತಿಯ ಸಂಕೇತವಾಗಿ ಬಿಳಿ ಪಾರಿವಾಳಗಳನ್ನು ಆಕಾಶಕ್ಕೆ ಹಾರಬಿಡಲಾಯಿತು.

ವಿ. ಜೆ. ಕೆ. ನಾಯರ್ ಮಾತನಾಡುತ್ತಾ ಇಂದು ಕಾರ್ಮಿಕರು ವಿಶ್ವಶಾಂತಿಗಾಗಿ, ದೇಶದ ಸಮಗ್ರತೆಗಾಗಿ ಮತ್ತು ಸಮಾಜ ಬದಲಾವಣೆಗಾಗಿ ಹೋರಾಡುವ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಎಲ್ಲ ತ್ಯಾಗ ಬಲಿದಾನಗಳಿಗೆ ಸಿದ್ಧರಾಗಬೇಕೆಂದು ಕರೆ ನೀಡಿದರು.

ಹರಿಹರ ನಗರದ ಪ್ರಮುಖ ಬೀದಿಗಳಲ್ಲಿ ಕಾರ್ಮಿಕರ ಬೃಹತ್ ಮೆರವಣಿಗೆ ನಡೆಯಿತು. ಡೊಳ್ಳು, ಕೋಲಾಟ, ಬ್ಯಾಂಡ್, ಮೊದಲಾದ ವಿವಿಧ ವಾದ್ಯ ಮೇಳಗಳಿಂದ ಅದು ಕೂಡಿತ್ತು. ಆರು ಅಡಿ ಎತ್ತರದ ಕಾರ್ಲ್‌ಮಾರ್ಕ್ಸ್‌ರವರ ಸುಂದರ ತೈಲ ಚಿತ್ರವನ್ನು ಅಲಂಕೃತ ಟ್ರಾಕ್ಟರಿನಲ್ಲಿ ಇಟ್ಟು ಮೆರೆಸಲಾಯಿತು.

ನಿರುದ್ಯೋಗಿಗಳ ಸಮಾವೇಶ

ಸಿ. ಐ. ಟಿ. ಯು. ರಾಜ್ಯ ಸಮಿತಿಯ ಕರೆಯ ಮೇರೆಗೆ ಹರಿಹರ ತಾಲ್ಲೂಕು ಮಟ್ಟದ ನಿರುದ್ಯೋಗಿಗಳ ಸಮಾವೇಶವನ್ನು ಜರುಗಿಸಲಾಯಿತು. 150ಕ್ಕೂ ಹೆಚ್ಚು ನಿರುದ್ಯೋಗಿ ಯುವಕರು ಭಾಗವಹಿಸಿದ ಈ ಸಮಾವೇಶವನ್ನು ಸಿ. ಐ. ಟಿ. ಯು ರಾಜ್ಯ ಸಮಿತಿ ಅಧ್ಯಕ್ಷರಾದ ಸೂರ್ಯನಾರಾಯಣ ರಾವ್ ಅವರು ಉದ್ಘಾಟಿಸಿದರು. ವಿ. ಜೆ. ಕೆ. ನಾಯರ್ ಅಧ್ಯಕ್ಷತೆ ವಹಿಸಿದ್ದರು. ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕಾಗಿ ಸಂವಿಧಾನದಲ್ಲಿ ಸೇರಿಸಬೇಕು, ಉದ್ಯೋಗ ಸಿಗುವವರೆಗೆ ನಿರುದ್ಯೋಗ ಪರಿಹಾರ ನೀಡಬೇಕು ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ಹಾಗೂ ಉದ್ಯೋಗ ಭರ್ತಿಯಲ್ಲಿ ನಡೆದಿರುವ ಲಂಚ, ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕೆಂಬ ಠರಾವುಗಳನ್ನು ಸಮಾವೇಶ ಅಂಗೀಕರಿಸಿತು.

ಕ್ರೀಡೆಗಳು

ಮೇ ದಿನದ ಶತಮಾನೋತ್ಸವದ ಅಂಗವಾಗಿ ಕಬ್ಬಡ್ಡಿ, ಸೈಕಲ್‌ರೇಸ್, ಓಟ ಮೊದಲಾದ ಪಂದ್ಯಾಟಗಳನ್ನು ನಡೆಸಲಾಯಿತು. ನಗರದ ವಿವಿಧ ತಂಡಗಳು ಹಾಗೂ ಕಾರ್ಮಿಕರು ಈ ಕ್ರೀಡೆಗಳಲ್ಲಿ ಉತ್ಸಾಹದಿಂದ ಪಾಲುಗೊಂಡರು.

ಉಪನ್ಯಾಸಗಳು

ಶತಮಾನೋತ್ಸವದ ಭಾಗವಾಗಿ ಏರ್ಪಡಿಸಲಾಗಿದ್ದ ಉಪನ್ಯಾಸ ಮಾಲಿಕೆಯಲ್ಲಿ ಸಿ. ಆರ್. ಭಟ್ಟ ಇವರು "ನಿರುದ್ಯೋಗ ಮತ್ತು ಬಡತನ" ಎಂಬ ವಿಷಯವಾಗಿಯೂ, ವಿ. ಜೆ. ಕೆ. ನಾಯರ್ ಇವರು "ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕ ವರ್ಗದ ಪಾತ್ರ" ಎಂಬ ವಿಷಯವಾಗಿಯೂ ಸಿ. ನಂಜುಂಡಪ್ಪ ಅವರು "ಕಾರ್ಮಿಕ ಸಂಘಗಳು ಮತ್ತು ಸಮಾಜ ಬದಲಾವಣೆ" ಎಂಬ ವಿಷಯದ ಕುರಿತಾಗಿ ಉಪನ್ಯಾಸವಿತ್ತರು.

ನಾಟಕಗಳು

ಶತಮಾನೋತ್ಸವದ ಕಾರ್ಯಕ್ರಮದ ಅಂಗವಾಗಿ ನಡೆಸಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾವೇರಿಯ ಸ್ನೇಹ ಕಲಾ ವೃಂದ, ಹರಪನಹಳ್ಳಿಯ ಸಮುದಾಯ ತಂಡ ಹಾಗೂ ಹರಿಹರದ ಸಮುದಾಯ ತಂಡಗಳು ಪಾಲುಗೊಂಡಿದ್ದವು. ಹಾವೇರಿಯ ಸತೀಶ್ ಕುಲಕರ್ಣಿಯವರಿಂದ "ಬಂಗಾರದ ಕೊಡ" ಹರಪನಹಳ್ಳಿಯ ಪ್ರೊ. ಎಸ್. ಎಸ್. ಹಿರೇಮಠ ಇವರಿಂದ "ಬೆಲ್ಚಿ" ಮತ್ತು ಹರಿಹರದ ಮಂಜುನಾಥ ಬೆಳಕೆರೆ ಇವರಿಂದ "ಮಾಯಾ ಬಜಾರ್" ಎಂಬ ನಾಟಕಗಳು ನಿರ್ದೇಶಿಸಲ್ಪಟ್ಟಿದ್ದವು. ಹರಪನಹಳ್ಳಿ ಸಮುದಾಯ ತಂಡದವರು ನಗರದ ಬೀದಿಗಳಲ್ಲಿ ಬೀದಿ ನಾಟಕಗಳನ್ನು ಹಾಗೂ ಕ್ರಾಂತಿ ಗೀತೆಗಳ ಕಾರ್ಯಕ್ರಮಗಳನ್ನು ನಡೆಸಿದರು.

ಕರಪತ್ರಗಳು

ಮೇ ದಿನದ ಶತಮಾನೋತ್ಸವದ ಅಂಗವಾಗಿ 5 ನಮೂನೆಯ ಒಟ್ಟು 12,000 ಕರಪತ್ರಗಳನ್ನು ಮುದ್ರಿಸಿ ಹಂಚಲಾಗಿತ್ತು. ಶತಮಾನೋತ್ಸವವನ್ನು ಜಂಟಿಯಾಗಿ ಆಚರಿಸುವ ಕುರಿತು ಸ್ಥಳೀಯ ಎ.ಐ.ಟಿ.ಯು.ಸಿ. ಯವರನ್ನು ಕೇಳಿಕೊಳ್ಳಲಾಗಿತ್ತು. ಆದರೆ ಅವರು ಜಂಟೀ ಕಾರ್ಯಕ್ರಮಕ್ಕೆ ಮುಂದಾಗಲಿಲ್ಲ. ○

ಸಿ. ಐ. ಟಿ. ಯು ಸ್ಥಾಪನಾ ದಿನಾಚರಣೆ

30-5-1986 ರಂದು ನಡೆದ ಸಿ. ಐ. ಟಿ. ಯು ಸ್ಥಾಪನಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಿ. ನಂಜುಂಡಪ್ಪನವರು ಮಾತನಾಡುತ್ತಾ ಸಂಘಟಿತ ಕಾರ್ಮಿಕರು ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಡುವ ಜೊತೆಯಲ್ಲಿ ರೈತರ, ಕೃಷಿಕೂಲಿಕಾರರ, ಅಸಂಘಟಿತ ಕಾರ್ಮಿಕರ, ನಿರುದ್ಯೋಗಿಗಳ ಪ್ರಶ್ನೆಗಳಿಗೋಸ್ಕರವೂ ಹೋರಾಡಲು ಮುಂದಾಗಬೇಕು ಎಂದು ಕರೆನೀಡಿದರು.

ಮೇ ದಿನದ ಶತಮಾನೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ವಿವಿಧ ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿತರಣೆ ಮಾಡುತ್ತಾ ಮಾತನಾಡಿದ ಹರಿಹರ ಪುರಸಭೆಯ ಅಧ್ಯಕ್ಷರಾದ ಸಾಬ್ಜಾನ್‌ಸಾಬ್ ಇವರು ಸಿ. ಐ. ಟಿ.ಯು ನೇತೃತ್ವದಲ್ಲಿ ಕಾರ್ಮಿಕ ಸಂಘಗಳ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿ. ಜೆ. ಕೆ. ನಾಯರ್ ಅವರು ಕಾರ್ಮಿಕ ವರ್ಗದ ಐಕ್ಯತೆಯನ್ನು ಸಾಧಿಸಲು ಸಿ. ಐ. ಟಿ. ಯು. ಬೇರೆ ಕಾರ್ಮಿಕ ಸಂಘಗಳೊಂದಿಗೆ ಜೊತೆಗೂಡಿ ಐಕ್ಯ ಹೋರಾಟಗಳನ್ನು ನಡೆಸಲು ಸದಾ ಸಿದ್ಧವಿದೆ ಎಂದು ಸ್ಪಷ್ಟಪಡಿಸಿದರು. ಆರಂಭದಲ್ಲಿ ನಿತ್ಯಾನಂದಸ್ವಾಮಿ ಸ್ವಾಗತಿಸಿದರು. ಕೊನೆಯಲ್ಲಿ ಆರ್. ಬಿ. ಅಂಗಡಿ ವಂದಿಸಿದರು.

ದಕ್ಷಿಣ ಆಫ್ರಿಕದಲ್ಲಿ ಕರಿಯರ ಮಾರಣ ಹೋಮ

ಹತ್ತು ವರ್ಷಗಳ ಹಿಂದೆ ದಕ್ಷಿಣ ಆಫ್ರಿಕದ ಸೊವೆಟೋ ನಗರದಲ್ಲಿ ಮಣ್ಣಿನ ಮಕ್ಕಳಾದ ಕಪ್ಪು ಜನರ ಮೇಲೆ ಬಿಳಿಯರ ಘೋರಹಿಂಸಾಚಾರ, ರಕ್ತಪಾತ, ಮಕ್ಕಳನ್ನೊಳಗೊಂಡು ಸಾವಿರಾರು ಜನರ ಗುಂಡಿಗಾಹುತಿ.

1976 ರಲ್ಲಿ ಅಲ್ಪ ಮತಸ್ತರಾದ ಬಿಳಿಯರು ತಮ್ಮ ಆಫ್ರಿಕಾನ್ಸ್ ಭಾಷೆಯನ್ನು ಶಾಲೆಗಳಲ್ಲಿ ಕಲಿಸಲು ಒತ್ತಾಯ ಮಾಡಿದರು. ಅದೇ ವರ್ಷ ಜೂನ್ 16 ರಂದು 15 ಸಾವಿರ ಕರಿಯ ವಿದ್ಯಾರ್ಥಿಗಳು ಸ್ವಾಟೋಕಿರಿಯ ಹೈಸ್ಕೂಲಿನಲ್ಲಿ ನೆರೆದು ಆಫ್ರಿಕಾನ್ಸ್ ಭಾಷೆ ಹೇರುವುದನ್ನು ಪ್ರತಿಭಟಿಸಿದರು. ಪೋಲೀಸರು ಗೋಳೀಬಾರು ಮಾಡಿದರು. ನೂರಾರು ವಿದ್ಯಾರ್ಥಿಗಳು ಗುಂಡಿಗಾಹುತಿಯಾದರು. ಇದರ ಪರಿಣಾಮವಾಗಿ ದೇಶಾದ್ಯಂತ ದಂಗೆ ನಡೆಯಿತು. ಸಾವಿರಾರು ಕರಿಯರು ಆ ದಂಗೆಯಲ್ಲಿ ಹುತಾತ್ಮರಾದರು.

ಬಿಳಿಯರ ವಿರುದ್ಧ ಆಫ್ರಿಕಾ ಜನರ ಸ್ವಾತಂತ್ರ್ಯ ಹೋರಾಟದಲ್ಲಿ ಸೊವೆಟೋ ನಗರ ಚಿರಸ್ಮರಣೀಯವಾಗಿ ಉಳಿದಿದೆ. ಅಂದು ಗುಂಡಿಗೆ ಬಲಿಯಾದ ಹುತಾತ್ಮರ ಬಿಸಿ ರಕ್ತ ಹಾಗೂ ಚಿತೆಯ ಅಗ್ನಿ ಕರಿಯಜನರ ಧೀರಹೋರಾಟಕ್ಕೆ ಸ್ಫೂರ್ತಿ ನೀಡಿ ಅದನ್ನು ಬಲಗೊಳಿಸಿದೆ.

ಸೊವೆಟೋ ಹತ್ಯಾಕಾಂಡದ ದಶವರ್ಷದ ಆಚರಣೆ ಕರಿಯರ ವಿಮೋಚನಾ ಹೋರಾಟಕ್ಕೆ ಮತ್ತಷ್ಟು ಪ್ರೋತ್ಸಾಹ ನೀಡಬಹುದೆಂದು ಅಂಜಿ, ಬೋಥಾ ಸರಕಾರ ರಾಷ್ಟ್ರದಾದ್ಯಂತ ತುರ್ತುಪರಿಸ್ಥಿತಿಯನ್ನು ಹೇರಿ 1976 ರ ಪುನರಾವರ್ತನೆ ಮಾಡಿದೆ. ಆದರೆ ಕಳೆದ ಹಲವಾರು ವರ್ಷಗಳಿಂದಲೂ ಬೋಥಾರ ಬೂಟುಕಾಲಿನ ರುಚಿ ಕಂಡ ಆಫ್ರಿಕದ ವೀರ ಕರಿಯ ಜನ ಬೂಟುಕಾಲನ್ನು ಸುಟ್ಟು ಹಾಕಿ ತಮ್ಮ ರಾಷ್ಟ್ರದ ಅಧಿಪತ್ಯವನ್ನು ಪಡೆಯುವ ನಿರ್ಧಾರದಿಂದ ಹೋರಾಟವನ್ನು ಮುಂದುವರಿಸಿದ್ದಾರೆ.

ಸೆಪ್ಟೆಂಬರ್, 1984 ರಿಂದಲೂ 2 ಸಾವಿರಕ್ಕೂ ಮೇಲ್ಪಟ್ಟು ಕರಿಯಜನ ಗುಂಡಿಗೆ ಬಲಿಯಾಗಿದ್ದಾರೆ. ಆ ಬಲಿದಾನ ಕೆಳ ಮಟ್ಟಕ್ಕೆ ತಳ್ಳಿ ಕರಿಯರ ಬಹಿಷ್ಕಾರದ ವಿರೋಧಿ ಚಳುವಳಿಗೆ ಕ್ರಾಂತಿಕಾರಿ ಸ್ವರೂಪ ಕೊಟ್ಟಿದೆ. ತುರ್ತು ಪರಿಸ್ಥಿತಿ ಹೇರಿದ ನಂತರ ಕಳೆದ ಒಂದು ವಾರದಲ್ಲಿಯೇ ಸಾವಿರಾರು ಜನ ಬಂಧನಕ್ಕೊಳಗಾಗಿದ್ದಾರೆ. ಹಲವಾರು ಜನ ಗುಂಡಿಗಾಹುತಿಯಾಗಿದ್ದಾರೆ. ಕರಿಯರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ನೆಲ್ಸನ್ ಮಾಂಡೆಲಾ ಕಳೆದ 20 ವರ್ಷಗಳಿಂದಲೂ ಕಾರಾಗೃಹವಾಸದಲ್ಲಿದ್ದಾರೆ. ಅವರ ಪತ್ನಿಯ ಮೇಲೆ ಹಲವಾರು ಪ್ರತಿಬಂಧ ಹೇರಲಾಗಿದೆ.

ದ. ಆಫ್ರಿಕದಲ್ಲಿ ನೆಲೆಸಿರುವ ಬರ್ಬರ, ಅನಾಗರಿಕ ಹತ್ಯಾಕಾಂಡ ಹಾಗೆಯೇ ತುರ್ತು ಪರಿಸ್ಥಿತಿಯ ವಿರುದ್ಧ ಜಗತ್ತಿನಾದ್ಯಂತ ಪ್ರತಿಭಟನೆಯ ಕೂಗಿನಿಂದ ಬೋಥಾ ಎದೆಗುಂದದೆ "ತನ್ನ ಕಾಲ ಮೇಲೆ ತಾನು ನಿಂತು" ದಬ್ಬಾಳಿಕೆ ಮುಂದುವರಿಸುತ್ತೇನೆಂದು ಸಾರಿದ್ದಾನೆ. ಅಮೇರಿಕ - ಬ್ರಿಟನ್‌ಗಳಂಥ ರಾಷ್ಟ್ರಗಳು ದ. ಆಫ್ರಿಕದಲ್ಲಿ ಸಾಕಷ್ಟು ಬಂಡವಾಳ ಹೂಡಿರುವುದರಿಂದ ಬೋಥಾ ಸರಕಾರದ ಮೇಲೆ ಆರ್ಥಿಕ ದಿಗ್ಬಂಧನ ಹೇರಿ, ಪ್ರಿಟೋರಿಯಾ ಸರಕಾರದ ಸೊಕ್ಕು ಮುರಿಯಲು ತಯಾರಿಲ್ಲ.

"ಆಫ್ರಿಕದಲ್ಲಿ ಹೇರಿರುವ ತುರ್ತು ಪರಿಸ್ಥಿತಿ ಕುಸಿದು ನಾಶವಾಗುತ್ತಿರುವ ಆಡಳಿತೆಯ ಪ್ರಸವ ವೇದನೆ" ಎಂದು ಸೋವಿಯತ್ ಸರಕಾರ ಬಣ್ಣಿಸಿದೆ.

ದ. ಆಫ್ರಿಕದ ಮಣ್ಣಿನ ಮಕ್ಕಳು ತಮ್ಮ ನೆಲದಲ್ಲೇ ಪರಕೀಯರಾಗಿ, ಅನ್ಯಾಯ ಅಕ್ರಮಗಳಿಗೊಳಗಾಗಿ ಉಳಿಯ ಬೇಕಾದಂಥ ಪರಿಸ್ಥಿತಿ, ಜನಾಂಗ ಭೇದ, ವರ್ಣ ದ್ವೇಷಗಳ ಕ್ರೂರ ಅಟ್ಟಹಾಸವನ್ನು ಕೊನೆಗೊಳಿಸುವ ನಿರ್ಧಾರವನ್ನು ಜಗತ್ತಿನ ಸ್ವಾತಂತ್ರ್ಯ ಪ್ರೇಮಿ ಜನ ಕೈಗೊಂಡಿದ್ದಾರೆ. ಅದು ಯಶಸ್ವಿಯಾಗಿ ಕರಿಯರೂ ತಮ್ಮ ದೇಶದ ಸಾರ್ವಭೌಮರಾಗಿ ಬಾಳುವಂಥ ಕಾಲ ಸನ್ನಿಹಿತವಾಗುತ್ತಿದೆ. ○

ಶಿವಮೊಗ್ಗ : ಜಿಲ್ಲಾಧಿಕಾರಿಗಳಿಗೆ ಮನವಿ

9-6-86 ರಂದು ಡಿ. ವೈ. ಎಫ್. ಐ. ಜಿಲ್ಲಾ ಸಮಿತಿ ಸದಸ್ಯರು ಜಿಲ್ಲಾಧಿಕಾರಿಗಳಿಗೆ ನಗರದ ಜನತೆಯ ಪರವಾಗಿ ಮನವಿ ಅರ್ಪಿಸಿದರು. ಇತ್ತೀಚೆಗೆ ನಗರದ ಉಪ್ಪಾರ ಕೇರಿಯಲ್ಲಿ ಸೌಮಿ (ರಾಜನ್) ಎಂಬುವನು ಕೊಲೆಯಾಗಿರುವುದನ್ನು ಪ್ರಸ್ತಾಪಿಸಿ ಈ ವಿಚಾರದಲ್ಲಿ ನಗರದ ಸಾರ್ವಜನಿಕರಲ್ಲಿ ಉಂಟಾಗಿರುವ ಕಳವಳವನ್ನು ವ್ಯಕ್ತ ಮಾಡಿದರು. ಈ ಸಂಬಂಧ ಕೂಡಲೇ ಕ್ರಮ ಕೈಗೊಂಡು ತಪಿತಸ್ಥರನ್ನು ಪತ್ತೆಹಚ್ಚಿ ಜನರಲ್ಲಿ ಮೂಡಿರುವ ಕಳವಳವನ್ನು ದೂರ ಮಾಡಬೇಕೆಂದು ವಿನಂತಿಸಿಕೊಂಡರು.

ಜಿಲ್ಲಾಧಿಕಾರಿಗಳು ಈ ಸಂಬಂಧ ಎಲ್ಲ ಕಾನೂನು ಕ್ರಮಗಳನ್ನು ಕೈಗೊಂಡಿದ್ದು ಜನರ ಕಳವಳವನ್ನು ದೂರ ಮಾಡಲು ಪೋಲೀಸ ಇಲಾಖೆ ಶಕ್ತಿಮೀರಿ ಶ್ರಮಿಸುವುದೆಂದು ಭರವಸೆ ನೀಡಿದರು.

ಎಡರಂಗ ಪಕ್ಷಗಳ ಜಯಭೇರಿ

(1ನೆಯ ಪುಟದಿಂದ)

ಚುನಾಯಿತ ಪ್ರತಿನಿಧಿಗಳು ಜಿಲ್ಲಾ ಮಟ್ಟದಲ್ಲಿ ಯೋಜನೆಗಳನ್ನು ತಯಾರಿಸಬೇಕೆಂಬುದಕ್ಕೆ ಕಳೆದ ಒಂದು ವರ್ಷದಿಂದ ಪ್ರಾಧಾನ್ಯತೆ ಕೊಡಲಾಗುತ್ತಿದೆ. ಈ ರೀತಿ ಜಿಲ್ಲಾ ಮಟ್ಟದ ಸಂಸ್ಥೆಗಳ ಮೂಲಕ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗಳ ಸಂಯೋಜನೆಯತ್ತ ಗಮನ ಹರಿಸಲಾಗುತ್ತಿದೆ. ಇದು ಬಹಳ ಮಹತ್ವದ ಬೆಳವಣಿಗೆ. ಯಾಕೆಂದರೆ ಎಡರಂಗ ಸರಕಾರ ಇಡೀ ರಾಜ್ಯದ ಬೆಳವಣಿಗೆಯಲ್ಲಿ ಪಟ್ಟಣಗಳ ಪಾತ್ರವನ್ನು ಗಮನಿಸಿ, ಪಟ್ಟಣಗಳೊಳಗೆ ಎಲ್ಲಾ ತರದ ನಾಗರಿಕ ಅನಾನುಕೂಲತೆಗಳನ್ನು ಪೂರೈಸುವುದಷ್ಟೇ ಅಲ್ಲ ಇಡೀ ಪ್ರದೇಶವನ್ನೇ ಗಮನಕ್ಕೆ ತೆಗೆದುಕೊಂಡು ನಗರಗಳು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಮಾರ್ಗದರ್ಶಕವಾಗಬೇಕೆಂದು ಅಪೇಕ್ಷಿಸುತ್ತಿದೆಂಬುದನ್ನು ತೋರಿಸಿಕೊಡುತ್ತಿದೆ. ಈ ರೀತಿ ಪಟ್ಟಣ ಮತ್ತು ಹಳ್ಳಿಗಳೊಳಗೆ ಸಂಬಂಧಿತ ಅಭಿವೃದ್ಧಿ ಕೆಲಸಗಳಾದರೆ, ಬರಗಾಲ-ನೆರೆಹಾವಳಿಯಂಥ ಸಂಧಿಗ್ಧ ಪರಿಸ್ಥಿತಿಯಲ್ಲಿ ಹಳ್ಳಿಜನ ನಗರಗಳಿಗೆ ವಲಸೆ ಹೋಗುವುದು ತಪ್ಪುತ್ತದೆ. 1981-82 ರ ಭೀಕರ ಬಂಗಾಲ, 1978 ರ ನೆರೆ ಹಾವಳಿಯ ಸಮಯದಲ್ಲಿ ಹಳ್ಳಿ ಜನ ಅತ್ಯಂತ ಕಂಗಾಲ ಪರಿಸ್ಥಿತಿಯಲ್ಲಿದ್ದಾಗ ಪಂಚಾಯತಿ ಮತ್ತು ನಗರ ಸಭೆಗಳು ಸ್ಥಳೀಕವಾಗಿಯೇ ಪರಿಹಾರ ಕಾರ್ಯ ಕೈಗೊಂಡದ್ದರಿಂದ ಯಾರೊಬ್ಬರೂ ಪಟ್ಟಣ ಸೇರಲಿಲ್ಲ. ಪ. ಬಂಗಾಲದ ಈ ಅನುಭವ ಪ್ರೆಸ್ಸಿನವರನ್ನೊಳಗೊಂಡು ಬಹಳ ಜನರಲ್ಲಿ ಆಶ್ಚರ್ಯ ಉಂಟು ಮಾಡಿದೆ.

ಕೆಲವೇ ಪಟ್ಟಣಗಳಲ್ಲಿ ಕೈಗಾರಿಕೆಗಳು ಕೇಂದ್ರೀಕೃತವಾಗಿರುವುದರಿಂದ, ಎಲ್ಲ ಅನುಕೂಲತೆಗಳು ಅಲ್ಲಿ ಸಿಗುತ್ತಿರುವುದರಿಂದ ಜನರಲ್ಲಿ ಅಂಥ ನಗರಗಳಿಗೆ ಆಕರ್ಷಿಸಲ್ಪಡುತ್ತಾರೆ. ಅದನ್ನು ತಪ್ಪಿಸಲು ನಗರ ಸಭೆಗಳ ಹದ್ದಿಯಲ್ಲಿಯೇ ಎಣ್ಣೆ, ಘಾಣ, ಒಕ್ಕಲುತನಕ್ಕೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಸ್ಥಾಪಿಸಿ, ಜನರನ್ನು ಆಕರ್ಷಿಸುವ ಕಾರ್ಯಕ್ರಮ ಮತ್ತೊಂದು. ಈ ಧೋರಣೆಯಿಂದಾಗಿ ದೊಡ್ಡ ನಗರ ಹಾಗೂ ಇತರಮಧ್ಯಮ ಸಣ್ಣ, ನಗರಗಳೊಳಗಿನ ಅಂತರವನ್ನು ನಿವಾರಿಸಿ ರಾಜ್ಯದ ಸಮಗ್ರ ಬೆಳವಣಿಗೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ.

ಸಹಾಯದ ಸ್ವರೂಪ

1) ಅಧ್ಯಕ್ಷರು ಗುಮಾಸ್ತೆಯರಷ್ಟೆ ಆಡಳಿತ ನಡೆಸುತ್ತಿದ್ದ ನಗರ ಸಭೆಗಳಿಗೆ ಅಕೌಂಟೆಂಟ್ ಮತ್ತು ಇಂಜಿನಿಯರುಗಳನ್ನು ಒದಗಿಸಲಾಗಿದೆ.

2) ಅವರೇ ವಾರ್ಷಿಕ ಯೋಜನೆಗಳನ್ನು ಸಿದ್ಧಗೊಳಿಸಿ ಜಿಲ್ಲಾ ಯೋಜನಾಧಿಕಾರಿಗಳಿಗೆ ಒದಗಿಸುವಂತೆ ಸೂಚಿಸಲಾಗಿದೆ. ಗ್ರಾಮಾಂತರ ಪ್ರದೇಶವನ್ನು ಪಟ್ಟಣದ ಜೊತೆಯಲ್ಲೇ ಅಭಿವೃದ್ಧಿಗೊಳಿಸಲು ಅದು ಸಹಾಯವಾಗಿದೆ.

3) ಯೋಜನೆಗಳನ್ನು ತಯಾರಿಸಲು, ವಿಷಯಗಳನ್ನು ವಿನಿಮಯಗೊಳಿಸುವ ಸಲುವಾಗಿ ಸಹಾಯ ಮಾಡಲು ಸ್ಥಳೀಯ ಸಂಸ್ಥೆಗಳ ಸರಕಾರ ಮತ್ತು ನಗರಗಳ ಅಭ್ಯಾಸದ ಸಲುವಾಗಿ ಒಂದು ಸಂಸ್ಥೆ ರಚಿಸಲಾಗಿದೆ.

4) ನಗರ ಸಭೆಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕ್ರಮ ಸೂಚಿಸುವಂತೆ, ಆ ಸೂಚನೆಗಳು ಜ್ಯಾರಿಯಲ್ಲಿ ತರುವಂತೆ ನಗರ ಸಭೆಗಳ ಆರ್ಥಿಕ ಕಮಿಶನ್ ನೇಮಿಸಲಾಗಿದೆ.

5) ಈ ಮುಂಚೆ ಕಲ್ಕತ್ತದಲ್ಲಿ ಸಂಗ್ರಹಿಸಿದ ಎಂಟ್ರಿಕರವನ್ನು ಅಲ್ಲೇ ಖರ್ಚು ಮಾಡಲಾಗುತ್ತಿತ್ತು. ಈಗ ಅದನ್ನು ಇಡೀ ರಾಜ್ಯಕ್ಕೆ ಹಂಚಲಾಗುತ್ತಿದೆ. ಅದರಿಂದಾಗಿ ನಗರ ಸಭೆಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ.

6) ತಮ್ಮ ಕಾಲ ಮೇಲೆ ನಿಂತು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವಂತೆ ಮಾಡಲು ರಾಜ್ಯಸರಕಾರ ಪುರಸಭೆಗಳಿಗೆ ಸಹಾಯಧನವನ್ನು ಹೆಚ್ಚಿಸಿದೆ.

ಎಡರಂಗ ಸರಕಾರದ ಗ್ರಾಮಾಂತರ ಪ್ರದೇಶಕ್ಕೆ ಅಧಿಕಾರ ವಿಕೇಂದ್ರಿಕರಣ, ಗ್ರಾಮಾಂತರ ಪ್ರದೇಶದ ಅಭಿವೃದ್ಧಿ, ಆಡಳಿತೆಯ ಹೊಸಯೋಜನೆ, ಆರ್ಥಿಕ ಸಹಾಯ ಹಾಗೆಯೇ ಅವುಗಳಿಗೆ ಚುನಾವಣೆಯಿಂದಾಗಿ, ಕಾಂಗ್ರೆಸ್ ಆಡಳಿತೆಯಲ್ಲಿ ಕಳೆದ ಹಲವಾರು ದಶಕಗಳಿಂದ ಕುಂಠಿತಗೊಂಡು ವಿಶ್ಚಲವಾಗಿದ್ದ ಹಲವಾರು ನಗರ ಸಭೆಗಳು ಈಗ ಚಟುವಟಿಕೆಗಳಿಂದ ತುಂಬಿ ತುಳುಕುತ್ತಿವೆ.

1984 ರ ಲೋಕಸಭೆ ಚುನಾವಣೆಯಲ್ಲಿ ಇಂದಿರಾಗಾಂಧಿ ಹತ್ಯೆ ಪರಿಣಾಮ ಬೀರಿತ್ತು. ಆಗ ಮುಚ್ಚಲ್ಪಟ್ಟ ಹೊರಗೀಲಿ ಹಾಕಲ್ಪಟ್ಟ ಕಾರ್ಖಾನೆಗಳನ್ನೆಲ್ಲ ತೆರೆಯಿಸಲಾಗುವುವೆಂದು ಕಾಂಗ್ರೆ ಮುಖಂಡರು ಸಾರಿದ್ದರು. ಮುಖ್ಯಮಂತ್ರಿ ಜ್ಯೋತಿಬಸು ಅವರು ಅದರ ಕುರಿತು ಎಲ್ಲಾ ಎಂ. ಪಿ. ಗಳಿಗೆ ಪತ್ರ ಬರೆದಿದ್ದಾರೆ. ಆದರೆ ಕಾಂಗ್ರೆ ಅಶ್ವಾ

ಸನೆ ಬರೇ ಸುಳ್ಳೆಂದು ಜನರಿಗೆ ಖಾತ್ರಿಯಾಗಿದೆ. ಹಾಗೆಯೇ ಗನಿಖಾನ್ ಚೌಧರಿಯವರು ತಾವು ಆರಿಸಿ ಬಂದರೆ ಎಲ್ಲರಿಗೂ ಕೆಲಸ ಕೊಡಿಸುವುದಾಗಿ ಆಶ್ವಾಸನೆ ನೀಡಿದ್ದರು. ಅದು ಸುಳ್ಳಾಗಿದೆ. ಪೆಟ್ರೋಕೆಮಿಕಲ್ ಯೋಜನೆ, ಇಲೆಕ್ಟ್ರೋನಿಕ್ ಕಂಪೆನಿ, ಮೊದಲಾದವುಗಳನ್ನು ಪ್ರಾರಂಭಿಸುವ ಅಶ್ವಾಸನೆ ಕೂಡ ಸುಳ್ಳಾಗಿರುವುದನ್ನು ಯುವಕರು ಕಾಣುತ್ತಿದ್ದಾರೆ. ಅವುಗಳಿಂದಾಗಿ ಮತದಾರರಿಗೆಲ್ಲ ಎಡರಂಗ ಸರಕಾರದ ಮೇಲೆವಿಶ್ವಾಸ ಮರುಕಳಿಸುವಂತಾಗಿದೆ.

ಜನರು ಎಡರಂಗದ ಮೇಲೆ ಅದರ ಧೋರಣೆ ಮೇಲೆ ವಿಶ್ವಾಸವ್ಯಕ್ತಪಡಿಸಿದ್ದಾರೆ. ಅವರ ಆಶಯಗಳನ್ನು ಪೂರೈಸುವ ಆಶ್ವಾಸನೆಯನ್ನು ಎಡರಂಗ ನೀಡಿದೆ.

ವಂತಿಗೆ ಶುಲ್ಕ ವಿರೋಧಿಸಿ ಸಮಾವೇಶ

ಭಾರತದ ವಿದ್ಯಾರ್ಥಿ ಫೆಡರೇಷನ್ ಆಶ್ರಯದಲ್ಲಿ ಸೆಂಟ್ರಲ್ ಕಾಲೇಜಿನ ಸೆನೆಟ್‌ಹಾಲ್‌ನಲ್ಲಿ ವಂತಿಗೆ ಶುಲ್ಕ ವಿರೋಧಿ ವಿದ್ಯಾರ್ಥಿ, ಶಿಕ್ಷಕ ಮತ್ತು ಪೋಷಕರ ಸಮಾವೇಶವು ಯಶಸ್ವಿಯಾಗಿ ಜರುಗಿತು. ಸಮಾವೇಶದಲ್ಲಿ ಡಾ: ಅನುಪಮ ನಿರಂಜನ, ಅಖಿಲ ಭಾರತ ವಕೀಲರ ಸಂಘದ ರಾಜ್ಯ ಪ್ರ ಕಾರ್ಯದರ್ಶಿ ಗೋಪಾಲಗೌಡ, ಕೃಷಿ ಪದವೀದರರಾದ ಜಿ. ಎನ್. ನಾಗರಾಜ್, ಬೆಂಗಳೂರು ವಿ. ವಿ. ಅಧ್ಯಾಪಕರ ಸಂಘದ ಶ್ರೀನಿವಾಸ ಮೂರ್ತಿ, ಇವರುಗಳು ಮಾತನಾಡಿದರು. ಅಧ್ಯಕ್ಷತೆಯನ್ನು ರಾಜ್ಯ ವಿ.ವಿ. ಅಧ್ಯಾಪಕರ ಸಂಘದ ಉಪಾಧ್ಯಾಕ್ಷರಾದ ಬಿ. ವೆಂಕಟೇಶಮೂರ್ತಿಯವರು ವಹಿಸಿದ್ದರು. ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಎಸ್. ರಾಜಣ್ಣ ನಿರ್ಣಯ ಮಂಡಿಸಿದರು. ನಿರ್ಣಯ ಬೆಂಬಲಿಸಿ ಎ. ಐ. ಎಸ್. ಎಫ್. ರಾಜ್ಯ ಉಪಾಧ್ಯಕ್ಷ ನಿರಂಜನ ಮಾತನಾಡಿದರು.

ಸಭೆಯನ್ನುದ್ದೇಶಿಸಿ ಮಾತಾನಾಡಿದ ಭಾಷಣಕಾರರು ಶಿಕ್ಷಣರಂಗದ ಖಾಸಗೀಕರಣ ಮತ್ತು ವ್ಯಾಪಾರೀಕರಣದಿಂದ ಶಿಕ್ಷಣ ಒಂದು ದುಬಾರಿ ಸರಕಾಗಿದ್ದು ಜನಸಾಮಾನ್ಯರ ಕೈಗೆಟುಕದಂತಾಗಿದೆಂದೂ ಹೇಳಿದರು. ವಿದ್ಯಾಭ್ಯಾಸದಿಂದ ವಂಚಿತರಾಗಿ ಕೋಟ್ಯಾಂತರ ಅನಕ್ಷರಸ್ಥರ ಸೈನ್ಯವು ಇನ್ನಷ್ಟು ಬೆಳೆಯಲು ಕಾರಣವಾಗಿದೆ. ಉನ್ನತ ವರ್ಗದವರ ಸೊತ್ತಾಗಿರುವ ನೂತನ ಶಿಕ್ಷಣ ನೀತಿಯನ್ನು ಖಂಡಿಸಲಾಯಿತು. ಡೊನೇಷನ್ ಶುಲ್ಕ ವಸೂಲಿಯನ್ನು ಸಂಪೂರ್ಣವಾಗಿ ನಿಷೇದಿಸಿ ಸಮಾವೇಶ ಒತ್ತಾಯಿಸಿತು.

ಕಾವೇರಿ ನದಿ ನೀರಿನ ಹಂಚಿಕೆ

(1ನೆಯ ಪುಟದಿಂದ)

ಕೇಂದ್ರದ ಮಂಜೂರಿ ದೊರಕದ್ದರಿಂದ ರಾಜ್ಯ ಸರಕಾರವೇ ಈ ಯೋಜನೆಗಳಿಗಾಗಿ ತನ್ನ ಬೊಕ್ಕಸದಿಂದಲೇ ಹಣ ವೆಚ್ಚ ಮಾಡುತ್ತಿದೆ. ಈ ಯೋಜನೆಗಳಿಂದ ತಮಗೆ ನಷ್ಟವಾಗುತ್ತದೆಂದು ತಮಿಳುನಾಡು ಸರಕಾರ ಆಕ್ಷೇಪಿಸುತ್ತ ಬಂದಿದೆ.

ಕಾವೇರಿ ನದಿ ದಕ್ಷಿಣ ಭಾರತದ ಪ್ರಮುಖ ನದಿಗಳಲ್ಲೊಂದು ಒಟ್ಟು 740 ಸಾವಿರ ದಶ ಲಕ್ಷ ಘನ ಅಡಿಗಳಷ್ಟು ನೀರು ಬರಬಹುದಾದ ಈ ನದಿಗೆ ಕರ್ನಾಟಕದ ಕೊಡುಗೆ ಪ್ರತಿಶತ 52.2 ರಷ್ಟು. ಆದರೆ ಅದಕ್ಕೆ ಸಿಕ್ಕಿರುವ ಪಾಲು 177 ಸಾವಿರ ದಶ ಲಕ್ಷ ಘನ ಅಡಿಗಳು ಮಾತ್ರ ಕಾರಣ ನಮ್ಮ ರಾಜ್ಯದಲ್ಲಿ ಈ ನದಿಯಿಂದ ನೀರುಣಿಸುವ ಪ್ರದೇಶವನ್ನು ಹೆಚ್ಚು ಗೊಳಿಸಲು ಆಗಿಲ್ಲ. ಒಟ್ಟು 2.8 ಲಕ್ಷ ಹೆಕ್ಟಾರು ಭೂಮಿಗಷ್ಟೇ ನೀರಾವರಿ ಲಭ್ಯ. ತಮಿಳುನಾಡು ಈ ನದಿಗೆ ಸಲ್ಲಿಸುವ ನೀರಿನ ಪ್ರಮಾಣ ಪ್ರತಿ ಶತ 29.3 ರಷ್ಟು. ಆದರೆ 11.2 ಲಕ್ಷ ಹೆಕ್ಟೇರು ಭೂಮಿಗೆ ನೀರು ಪಡೆಯುತ್ತಿದೆ.

ಕರ್ನಾಟಕ ಸರಕಾರ ತನ್ನ ಪ್ರದೇಶದಲ್ಲಿ ಕಾವೇರಿ ನದಿಗೆ ಹೆಚ್ಚು ನೀರು ಒದಗಿಸುತ್ತಿರುವುದರಿಂದ, ನೀರಾವರಿಗಾಗಿ ಹಲವಾರು ಯೋಜನೆಗಳ ಅಗತ್ಯವಿರುವುದರಿಂದ ಶೇ. 50 ರಷ್ಟು ಪಾಲನ್ನು ಅದು ಕೇಳುತ್ತಿದೆ. ತಮಿಳುನಾಡು ತನ್ನ ಭತ್ತದ ಗಣಜಕ್ಕೆ ಶೇ.75 ರಷ್ಟು ಪಾಲು ಬೇಡುತ್ತಿದೆ.

1974 ರಲ್ಲಿ ಜಗಜೀವನ ರಾಂ ಕೇಂದ್ರದ ನೀರಾವರಿ ಮಂತ್ರಿಯಾಗಿದ್ದಾಗ ತಮಿಳುನಾಡಿಗೆ 479 ಸಾವಿರ ದಶಲಕ್ಷ ಘನ್ ಅಡಿ, ಕರ್ನಾಟಕಕ್ಕೆ 177 ಸಾವಿರ ದಶ ಲಕ್ಷ ಘನ್ ಅಡಿ ಹಾಗೆಯೇ ಕೇರಳಕ್ಕೆ 5 ಸಾವಿರ ದಶ ಲಕ್ಷ ಘನ ಅಡಿ ನೀರು ಮಂಜೂರಿ ಮಾಡಿದ್ದರು. ಅದನ್ನು ಸಂಬಂಧಪಟ್ಟ ಸರಕಾರಗಳು ಒಪ್ಪಿರಲಿಲ್ಲ ಪಾಲಿಗಾಗಿ ಜಗಳ ಮುಂದುವರಿದಿದೆ ಮೊನ್ನಿನ ಸಭೆಯಲ್ಲೂ ಅದು ಬಗೆಹರಿದಿಲ್ಲ.

ನದಿ ನೀರಿನ ತಂಟೆಯನ್ನು ಆಯಾ ರಾಜ್ಯದ ಅವಶ್ಯಕತೆಗಳಿಗನುಸಾರವಾಗಿ ಹಂಚಬೇಕು. ಅದರ ಕುರಿತು ಮುಖ್ಯ ಮಂತ್ರಿಗಳೊಳಗೆ ಸೌಹಾರ್ದಯುತ ಚರ್ಚೆ ನಡೆಯಬೇಕು. ನದಿ ನೀರಿನ ತಂಟೆಯನ್ನು ಪಂಚಾಯತಿಗೆ ಒಪ್ಪಿಸಿದರೆ ನ್ಯಾಯ ಸಿಗಲು ತಡವಾಗುತ್ತದೆ. ಆದರಿಂದ ರಾಜ್ಯಗಳ ನೀರಾವರಿ ಯೋಜನೆಗಳಿಗೆ ಆತಂಕವಾಗುತ್ತದೆ. ಮುಖ್ಯ ಮಂತ್ರಿಗಳು ಮತ್ತೊಮ್ಮೆ ಸೇರಿ ಕಾವೇರಿ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ನಮ್ಮ ಅಪೇಕ್ಷೆ. ○

ಎಸ್. ಎಫ್. ಐ. ಅಧ್ಯಯನ ಶಿಬಿರ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ಸಮಿತಿಯು ಜುಲೈ 4 ರಿಂದ 6 ರ ವರೆಗೆ ಮೈಸೂರಿನಲ್ಲಿ ರಾಜ್ಯ ಮಟ್ಟದ ಅಧ್ಯಯನ ಶಿಬಿರವೊಂದನ್ನು ಏರ್ಪಡಿಸಿದೆ. ಸುಮಾರು ಒಂದು ನೂರು ಮಂದಿ ಪ್ರಮುಖ ಕಾರ್ಯಕರ್ತರು ಶಿಬಿರದಲ್ಲಿ ಭಾಗವಹಿಸುತ್ತಾರೆ. ಜುಲೈ 3 ರಂದು ಮೈಸೂರಿನಲ್ಲಿಯೇ ಎಸ್. ಎಫ್. ಐ. ರಾಜ್ಯಸಮಿತಿ ಸಭೆಯನ್ನು ಕರೆಯಲಾಗಿದೆ.

ಶಿಬಿರವು ಮೈಸೂರಿನ ಶಿವರಾಂಪೇಟೆಯ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಹೋಟೆಲ್ ಆಶೀರ್ವಾದ್‌ನಲ್ಲಿ ನಡೆಯುತ್ತದೆ ತಲಾ 15 ರೂ. ಶುಲ್ಕ ನಿಗದಿಪಡಿಸಲಾಗಿದೆ. ಶಿಬಿರಾರ್ಥಿಗಳನ್ನು ಸ್ವಾಗತಿಸಲು ಬಸ್ ನಿಲ್ದಾಣ ಮತ್ತು ರೇಲ್ವೆ ನಿಲ್ದಾಣಗಳಲ್ಲಿ ಸ್ವಯಂಸೇವಕರುತ್ತಾರೆ. ಪುರಭವನದ ಮುಂದಿರುವ ಸಿ. ಪಿ. ಐ. (ಎಂ) ಕಛೇರಿಯ ದೂರವಾಣಿ ಸಂಖ್ಯೆ 26082 ರಲ್ಲಿ ಸಹ ಸಂಪರ್ಕಿಸಬಹುದು.

ಡಿ. ವೈ. ಎಫ್. ಐ. ರಾಜ್ಯ ಸಮಿತಿಯ ಸಭೆ ಬದಲಾವಣೆ

ಡಿ. ವೈ. ಎಫ್. ಐ. ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಅನಿವಾರ್ಯ ಕಾರಣಗಳಿಂದಾಗಿ ಸೌಂದತ್ತಿಗೆ ಬದಲಾಗಿ ಮೈಸೂರಿನಲ್ಲಿ ದಿನಾಂಕ 2-3 ಜುಲೈ 1986 ರಲ್ಲಿ ಸೇರುತ್ತದೆ.

ಕಾ|| ಎಂ. ಎ. ಬೇಬಿ ಎಂ. ಪಿ. ಸಹ ಕಾರ್ಯದರ್ಶಿ ಡಿ. ವೈ. ಎಫ್. ಐ. ಅವರು ಸಭೆಗೆ ಭಾಗವಹಿಸುತ್ತಿದ್ದಾರೆ.

ಅನಿವಾರ್ಯ ಕಾರಣಗಳಿಂದಾಗಿ ಬೇಬಿ ಅವರ ಮಂಗಳೂರು, ಶಿವಮೊಗ್ಗ, ಹಾಸನ ಹಾಗೂ ಸೌಂದತ್ತಿಯ ಕಾರ್ಯ ಕ್ರಮಗಳನ್ನು ಮುಂದೂಡಲಾಗಿದೆ,

ಎಸ್. ಶಿವರಾಂ
ರಾಜ್ಯ ಕಾರ್ಯದರ್ಶಿ

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331
Editor P. Ramachandra Rao Managing Editor : N K. Upadhyaya